TIGHT BINDING

UNIVERSAL
LIBRARY
OU_200826
UNIVERSAL
LIBRARY

OUP—881—5-8-74—15,000

OSMANIA UNIVERSITY LIBRARY

Call No. K81·6 Accession No. PU.K 533

Author G61L
గుఱ్ఱం జాషువా

Title కొత్తలోకం

This book should be returned on or before the date last marked below.

# ಕಟ್ಟುವೆವು ನಾವು

ಎಂ. ಗೋಪಾಲಕೃಷ್ಣ ಅಡಿಗ

ಪ್ರಕಾಶಕರು
ಕಾವ್ಯಾಲಯ
ಮೈಸೂರು

ಎಲ್ಲ ಹಕ್ಕುಗಳೂ ಗ್ರಂಥಕರ್ತರಿಗೆ ಸೇರಿವೆ.

ಬೆಲೆ :

ಸಾದಾ ಪ್ರತಿ ರೂ. ೧–೪–೦ ಲೈಬ್ರರಿ ಪ್ರತಿ ರೂ ೨–೪–೦

ಪ್ರಕಾಶಕರು :

ಕೂಡಲಿ ಚಿದಂಬರಂ, ಕಾವ್ಯಾಲಯ, ಮೈಸೂರು.

ಮುದ್ರಣಕಾರರು :

ಜಿ. ಎಚ್. ರಾಮರಾವ್, ಬಿ.ಎಸ್‌ಸಿ.,

ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್,

ಮೈಸೂರು.

# ಮುನ್ನುಡಿ

ಈ ಕವನಗಳನ್ನು ಮೊದಲು ನಾನೆತ್ತಿಕೊಂಡು ಓದುಗರ ಕೈಗೆ ಕೊಡಬೇಕೆಂದು ಶ್ರೀಮಾನ್ ಗೋಪಾಲಕೃಷ್ಣ ಅಡಿಗರು ಅಪೇಕ್ಷಿಸಿದಾರೆ. ಹೀಗೆ ಓದಿಸಿ ಕೊಡುವುದಕ್ಕೆ ನಾನು ಸಂಕೋಚಪಡುವ ಕೆಲಸ ಕಾಣೆ. ಈ ಉಡುಗೊರೆಯ ಬೆಲೆ ಹಿರಿಯದು. ಇದನ್ನು ಸಾಹಿತ್ಯಲೋಕ ಅತ್ಯಾದರದಿಂದ ಸ್ವೀಕರಿಸುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಗೆಳೆಯ ಅಡಿಗರು ನನ್ನನ್ನು ಈ ಕೆಲಸಕ್ಕೆ ಏಕೆ ನಿಯೋಜಿಸಿದರೋ ಇದರ ಮರ್ಮ ನನಗೆ ಇನ್ನೂ ಪೂರ್ಣವಾಗಿ ಅರಿವಾಗದೆ ಉಳಿದಿದೆ. ಇದಕ್ಕೆ ಅವರು ನನ್ನಲ್ಲಿ ಇಟ್ಟಿರುವ ವಿಶ್ವಾಸ ಬಹುಮಟ್ಟಿಗೆ ಕಾರಣವಾಗಿರಬಹುದು. ಅಥವಾ ಅವರ ಕವನಗಳ ವಿಷಯದಲ್ಲಿ ನನಗಿರುವ ಆದರ ಅಭಿಮಾನಗಳು ಅವರ ಮನಸ್ಸಿಗೆ ಬಂದು, ನನ್ನ ಈ ಸದ್ಭಾವ ಈ ಕೃತಿಯನ್ನೋದುವ ಎಲ್ಲ ಸಹೃದಯರಲ್ಲೂ ಮೂಡಲಿ ಎಂಬ ಆಶಯ ಅವರಿಗಿರಬಹುದು. ನಾನಂತೂ ಈ ಕೆಲಸವನ್ನು ಬಹು ಪ್ರೀತಿಯಿಂದ ಮಾಡುತ್ತಿದೇನೆ.

ಶ್ರೀಮಾನ್ ಅಡಿಗರನ್ನು ನಾನು ಕವಿ ಎಂದು ಅರಿತುಕೊಂಡುದು ಅವರ " ಮೋಹನ ಮುರಲಿ " ಎಂಬ ಕವನವನ್ನು " ವಾಣಿ " ಮಾಸ ಪತ್ರಿಕೆಯಲ್ಲಿ ಮೊದಲು ಓದಿದಾಗ. ಅದನ್ನು ಓದಿ ನನಗೆ ರೋಮಾಂಚವುಂಟಾಯಿತು ಎನ್ನಬೇಕು. ಆ ಸಂತೋಷದಲ್ಲಿ ಆ ಪ್ರತಿಯನ್ನು ಎತ್ತಿಕೊಂಡು ನನ್ನ ಸ್ನೇಹಿತರು ಶ್ರೀಮಾನ್ ನಂ. ಶಿವರಾಮಶಾಸ್ತ್ರಿಗಳವರ ಕೊಟಡಿಗೆ ಹೋಗಿ ಅವರಿಗೆ ಓದಿ ಹೇಳಿದೆ. ಇಬ್ಬರೂ ನಾಲುಸಾಲನ್ನೂ ಚಪ್ಪರಿಸಿ ಸವಿದೆವು. ನಮ್ಮ ಹರ್ಷೋದ್ಗಾರವನ್ನು ಅಡಿಗರು ಕೇಳಿದ್ದರೆ ಎಷ್ಟು ಸಂತೋಷಪಟ್ಟುಕೊಳ್ಳುತ್ತಿದ್ದರೋ.

" ಏನಿದೇನಿದು ಹೊರಳುಗಣ್ಣಿನ ತೇಲುನೋಟದ ಸೂಚನೆ ?
ಯಾವ ಸುಮಧುರ ಯಾತನೆ ಯಾವ ದಿವ್ಯದ ಯಾಚನೆ ?"

ಅನುರಕ್ತನಾದ ಸಂತನು ಇದ್ದಕ್ಕಿದ್ದ ಹಾಗೆಯೇ ವಿರಕ್ತನಾಗುವ ಬಗೆಯನ್ನು ಕಂಡು ದಿಗಿಲು ಬಿದ್ದ ಪ್ರೇಯಸಿಯ ಕರುಣಾಕ್ರಂದನ ಈ ಗೀತದಲ್ಲಿ ಹೊಳಹು ಹಾಕಿದೆ. ಈ ದಿವ್ಯಗೀತವನ್ನು ಬರೆದ ಕವಿ ಕವಿಯಲ್ಲದಿದ್ದರೆ ಮತ್ತಾರು? ಇದಕ್ಕೆ ಮುಂಚೆ ಶ್ರೀ. ಅಡಿಗರ ಅನೇಕ ಕವನಗಳು ನನ್ನ ಕಣ್ಣಿಗೆ ಬಿದ್ದಿದ್ದವು. ಆದರೆ ಎದೆಯನ್ನು ತೆರೆದು ಅವರ ವಿಷಯದಲ್ಲಿ

ನನಗೆ ಗೌರವವುಂಟಾಗುವ ಹಾಗೆ ಮಾಡಿದ ಕವಿತೆ ಇದು. ಈ ಗೌರವವನ್ನು " ಭಾವತರಂಗ "ದ, ' ಕಲ್ಲಾಗು ' ' ನನ್ನ ಕಣ್ಣ ಮುಂದೆ ನಿಲ್ಲು ', ' ಸಖಿ ಬಾ ', ' ಇದು ಬಾಳು ', ' ಏನಿರಬಹುದು ' ಇತ್ಯಾದಿ ಕವನಗಳು ಮತ್ತು ' ಒಳತೋಟಿ ' ಯು

ಅಲ್ಲಿ ತಾವರೆ ಬೆಳಗು ಹನಿಮುಂಜುಗಳ ಕುಡಿದು
ನೇಸರಿನ ಕೈಗೆ ತುಟಿ ಹಚ್ಚುತಿಹವು "

* * * * *

ಆ ಬೆಟ್ಟಗಳ ಮುಡಿಗೆ ದಿನಕೊಮ್ಮೆ ದಿವ್ಯ ಪ್ರ-
ಭಾವಲಯಮಾಲೆ ಬಂದಪುದು ರವಿಯು

ಇಂಥ ಪ್ರಕೃತಿ ಚಿತ್ರಗಳು ಬೆಳಸಿದವು. ಆಗ ತರುಣರಲ್ಲಿ ಈ ಏರುವೆಯ ಕವಿಗಳು ಇದ್ದಾರೆಯೆ ಎಂದು ನಾನು ಬೆರಗಾದೆ.

ಈ ಸಂದರ್ಭದಲ್ಲಿ ಈ ಪ್ರಶ್ನೆ ಸಹಜವಾಗಿ ಏಳುತ್ತದೆ. " ಯಾವ ಗುಣದಿಂದ ಒಂದು ಛಂದೋಬಂಧ ಕವಿತೆ ಎನ್ನಿಸಿಕೊಳ್ಳುತ್ತದೆ, ಯಾವ ನ್ಯೂನತೆಯಿಂದ ಅಲ್ಲ—ಕಾವ್ಯದ ಆತ್ಮ ಯಾವುದು, ಯಾವ ಸಂಕೇತದಿಂದ, ಯಾವ ಸೂಚನೆಯನ್ನು ಕಂಡು ಅದರ ಇರವನ್ನು ನಿರ್ದೇಶಿಸುತ್ತೇವೆ ? " ಈ ಚರ್ಚೆ ವಿಪುಲವಾಗಿ ನಡೆದಿದೆ, ನಡೆಯುತ್ತಿದೆ. ತರ್ಕದಿಂದ ಈ ಪ್ರಶ್ನೆ ಬಗೆಹರಿಯುವ ಹಾಗಿಲ್ಲ. ಈಗ ಅಲ್ಲಮ ಪ್ರಭುವಿನ ಈ ವಚನವನ್ನು ನೆನೆಯಬಹುದು.

" ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ, ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಶಬ್ದದಂತೆ, ಗುಹೇಶ್ವರಾ, ನಿಮ್ಮ ಶರಣ ಸಂಬಂಧ ".

ವೀರಶೈವ ದರ್ಶನದ ಪರವಾಗಿ ಇದರ ಅರ್ಥ ಏನೇ ಇರಲಿ, ರಸಶಾಸ್ತ್ರದ ಪರವಾಗಿ ನಾವು ಇದಕ್ಕೆ ಬಹು ಮನೋಹರವಾಗಿ ವ್ಯಾಖ್ಯಾನ ಮಾಡಬಹುದು. " ಶಬ್ದದೊಳಗಣ ನಿಶ್ಶಬ್ದದಂತೆ " ಎಂಥ ಚಿತ್ತಾಕರ್ಷಕವಾದ ಮಾತು. ಕಾವ್ಯದ ಆತ್ಮ ಕವನದಲ್ಲಿ ಹಾಗೆ ಹದುಗಿದೆ. ಅದು ಅತೀಂದ್ರಿಯ ಆದರೂ ಅನುಭಾವ್ಯ. ಎಂಥ ಸಾಲಂಕೃತ ಛಂದೋಬದ್ಧ ಶಬ್ದಪುಂಜವೇ ಆಗಲಿ ಅದು ಅದರೊಳಗಣ ಈ ನಿಶ್ಶಬ್ದವನ್ನು ಅಂದರೆ ಅನಿರ್ವಾಚ್ಯವನ್ನು ಕೇಳಿಸುವುದಕ್ಕೆ ಸಮರ್ಥವಾದರೆ ಮಾತ್ರ

ಕವನವೆನ್ನಿಸಿಕೊಂಡೀತು, ಸಹೃದಯಗ್ರಾಹ್ಯವಾಗಿ ಆನಂದವನ್ನೂ ಹರಡೀತು. ಮಿಕ್ಕವೆಲ್ಲ ಅಸಮರ್ಥ, ಆದುದರಿಂದ ವ್ಯರ್ಥ. ಆದರೆ ಈ ನಿಶ್ಶಬ್ದ ಶಬ್ದದೊಳಗಣ ನಿಶ್ಶಬ್ದ. ಶಬ್ದದಿಂದಲ್ಲದೆ ಇದರ ಅರಿವಾಗದು. ಅರ್ಥ ಸಹಿತವಾದ ಪದ ಸಮೂಹದಿಂದ ಈ ನಿಶ್ಶಬ್ದವನ್ನು ವ್ಯಂಜಿಸುವ ಕೌಶಲವನ್ನು ಸಾಧಿಸಬಲ್ಲ ಮಾಂತ್ರಿಕನನ್ನು ಮಾತ್ರ ನಾವು ಕವಿ ಎನ್ನುತ್ತೇವೆ. ಶ್ರೀಮಾನ್ ಅಡಿಗರ ಅನೇಕ ಕವಿತೆಗಳಲ್ಲಿ ಈ ಸಾಮರ್ಥ್ಯವಿದೆ.

ಅನುಭವಗಳ ನೈಜತೆ ಮತ್ತು ತೀವ್ರತೆ, ಭಾವಗಳ ನಾವೀನ್ಯ, ಶಬ್ದಗಳ ಸೌಂದರ್ಯ, ಪದಗಳ ಸಾರ್ಥಕ್ಯ, ಶೈಲಿಯ ಬಂಧುರತೆ ಮತ್ತು ಛಂದಸ್ಸಿನ ಅರ್ಥೋಚಿತ ಸ್ವಾಚ್ಛಂದ್ಯ—ಈ ಎಲ್ಲ ಗುಣಗಳನ್ನೂ ಹೊಂದಿ ಜೀವಕಳೆಯಿಂದ ಕಳಕಳಿಸುವ ಅನೇಕ ಪದ್ಯಗಳನ್ನು ಓದುಗರು ಶ್ರೀಮಾನ್ ಅಡಿಗರ ಈ ಪುಸ್ತಕದಲ್ಲೂ ಮತ್ತು "ಭಾವತರಂಗ" ದಲ್ಲೂ ಆರಿಸಿಕೊಂಡು ಆನಂದಿಸಬಹುದಾಗಿದೆ. "ಅತಿಥಿಗಳು", "ಧೂಮಲೀಲೆ", "ಸಮಾಜ ಭೈರವ", "ಯಾರಾದರು ನೀನಾಗಿರು"—ಎಂಥ ಮನೋಹರವಾದ ಕೃತಿಗಳಿವು! ಇಂಥವುಗಳನ್ನು ಬರೆದ ಕವಿಯನ್ನು ನಾಡು ಮನ್ನಣೆಗೈಯದೆ ಎಂತು ಇದ್ದೀತು? ಈ ಕೃತಿಗಳನ್ನೂ, "ಮೋಹನ ಮುರಲಿ" ಯನ್ನೂ ಈಗ ತಾನೆ ಓದಿದೆ; ಅಂದು ಅಡಿಗರ ಜತೆಯಲ್ಲಿ ಶ್ರೀರಂಗಪಟ್ಟಣದಿಂದ ಮೈಸೂರಿಗೆ ಬರುವಾಗ ಆ ಜನ ಜಂಗುಳಿಯ ಮಧ್ಯೆ ಹಸ್ತಪ್ರತಿಯಲ್ಲಿ ಓದಿ ಮರುಳಾದ ಅನುಭವ ಮರುಕಳಿಸಿತು. ಪರಿಚಯದಿಂದ ಇವುಗಳ ತೇಜಸ್ಸೇನೂ ಕಡಿಮೆಯಾಗಿಲ್ಲ. ದೂರದರ್ಶಕಯಂತ್ರದಿಂದ ನೋಡಿದವರು ಹೇಳುತ್ತಾರೆ-ಹಗಲಿನಲ್ಲೂ ರಾತ್ರಿ ಕಂಡಷ್ಟೆ ಹೊಳಪಿನಿಂದ ತಾರೆಗಳು ಹೊಳೆಯುತ್ತವೆ, ಎಂದು. ಸತ್ ಕೃತಿಗಳ ವಿಷಯದಲ್ಲೂ ಈ ಮಾತನ್ನು ಹೇಳಬಹುದು. ಹೊಗಳಿಕೆಯಿಂದಲೂ ಇವರ ಕವನಗಳು ಮಲಿನವಾಗುವಂಥಲ್ಲ ಎಂದು ನನ್ನ ನಂಬಿಕೆ.

"ಭಾವತರಂಗ" ದಲ್ಲಿ ಈ ಕವಿ ಹೀಗೆ ನುಡಿದಿದ್ದಾರೆ-

"........ಬಗೆಯೊಳಗನೇ ತೆರೆದು
ನನ್ನ ನುಡಿಯೊಳೆ ಬಣ್ಣ ಬಣ್ಣದಲಿ ಬಣ್ಣಿಸುವ
ಪನ್ನತಿಕೆ ಬರುವನಕ ನನ್ನ ಬಾಳಿದು ನರಕ"—ಎಂದು.

" ಕಟ್ಟುವೆವು ನಾವು " ಎಂಬ ಈ ಸಂಕಲನವನ್ನು ಓದುವವರಿಗೆ ಅವರ ಈ ಹಂಬಲು ತುಂಬುತ್ತಿರುವಂತೆ ತೋರುತ್ತದೆ. ತನ್ನ ಬಗೆಯನ್ನು ತಾನರಿತು ಬಣ್ಣಬಣ್ಣವಾಗಿ ಅದರ ವಿಲಾಸ ವೈಭವಗಳನ್ನು ಹೀಗೆ ತನ್ನ ಸ್ವರದಿಂದ ತಾನು ಹಾಡಹೊರಟಿರುವ ಇವರು ಈ ಕವನಗಳಲ್ಲಿ ವಿಷಾದ ಮುಕ್ತರಾಗುತ್ತಿರುವುದೂ ಅಭಿನಂದನೀಯವಾದ ಸಂಗತಿ. ಬಣ್ಣಿಸುವ ಪನ್ನತಿಕೆಯನ್ನು ನಾವು ಇಲ್ಲಿ ಬಹುವಾಗಿ ಕಾಣುತ್ತೇವೆ. ಶ್ರೀ ಬೇಂದ್ರೆ ಮತ್ತು ಶ್ರೀ ಪುಟ್ಟಪ್ಪ ಇವರ ಪ್ರಭಾವದಿಂದ ಶಕ್ತರು ಮಾತ್ರ ತಪ್ಪಿಸಿ ಕೊಳ್ಳಬಲ್ಲರು. ಈ ಕವಿಪ್ರವರರ ಶೈಲಿಯ ರಮಣೀಯತೆ ಅಷ್ಟು ಅನುಕರಣ ಪ್ರಚೋದಕವಾದುದು. ಹಾಗೆ ತಪ್ಪಿಸಿಕೊಂಡವರು ಮಾತ್ರ ನಮ್ಮ ನಾಡಿನ ಕಾವ್ಯ ಸಂಪತ್ತಿಯನ್ನು ಬೆಳಸಬಲ್ಲರು. ಈಗ ತಮ್ಮ ಆತ್ಮ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡು ಮುಕ್ತಕಂಠರಾಗಿ ಹಾಡ ಹೊರಟಿರುವ ಶ್ರೀಮರ್ಾ ಅಡಿಗರಿಂದ ನಮ್ಮ ಸರಸ್ವತಿಯ ಬಂಡಾರ ಬೆಳೆಯುತ್ತದೆ ಎನ್ನುವುದರಲ್ಲಿ ನನಗೆ ಸಂದೇಹವಿಲ್ಲ. ಆದರೆ ಇದು ಲೋಕಾರಾಮತೆಯ ಕಾಲ; ಅಂತರ್ಮುಖರೂ ಆತ್ಮಾರಾಮರೂ ಆದ ಕೋಮಲ ಮನಸ್ಕರಿಗೆ ಈಗ ಪುರಸ್ಕಾರ ಕಡಿಮೆ. ಆದರೆ ಇದು ಮಾತ್ರ ಅನಿವಾರ್ಯ: ಒಂದು ಸಮಾಜದ ಸಂಸ್ಕೃತಿ ಸಂಪನ್ನ ಹಾಗೂ ಸಭ್ಯ ಎನ್ನಿಸಿಕೊಳ್ಳಬೇಕಾದರೆ, ಎಷ್ಟೇ ಅಲ್ಪ ಪ್ರಮಾಣದಲ್ಲಾಗಲೀ— ನಮ್ಮ ಶರೀರಾರೋಗ್ಯಕ್ಕೆ ಅತ್ಯಲ್ಪ ಪ್ರಮಾಣದ ಧಾತುಗಳು ಹೇಗೋ ಹಾಗೆ—ಇಂಥ ಕವಿಗಳು ಆವಶ್ಯಕ. ಅವರನ್ನು ಗೌರವಿಸಿ, ಅವರ ಸ್ವಾತಂತ್ರ್ಯ ಸ್ವಾಚ್ಛಂದ್ಯಗಳನ್ನು ಹರಣಮಾಡದೆ ಪೋಷಿಸುವುದು, ಆತ್ಮರಕ್ಷಣೆಯಷ್ಟೆ ಮುಖ್ಯ ಎನ್ನಿಸುತ್ತದೆ. ಇಂಥ ಭಾವುಕರ ಸುಮಧುರ ಯಾತನೆ ಮತ್ತು ದಿವ್ಯದ ಯಾಚನೆ ಇಲ್ಲದೆ ಆ ನಾಡು ಎಂತು ಬದುಕೀತು. ಈ ಕವಿಗೆ ನಮ್ಮ ನಾಡಿನ ಪ್ರೇಮ ಗೌರವಗಳು ಇತೋಪ್ಯತಿಶಯವಾಗಿ ದೊರೆತು, ಅವರು ಪ್ರಸನ್ನಚಿತ್ತರೂ, ಸುಕೃತಿಗಳೂ, ಬಹುಕೃತಿಗಳೂ ಆಗಲೆಂದು ನಾನು ಹೃತ್ಪೂರ್ವಕವಾಗಿ ಆಶಿಸುತ್ತೇನೆ.

ಬೆಂಗಳೂರು
೧೧-೯-೧೯೪೪

ಪು. ತಿ. ನ.

# ಬಿನ್ನಹ

ಇಂದು ನನ್ನ ಎರಡನೆಯ ಕವನ ಸಂಕಲನ 'ಕಟ್ಟುವೆವು ನಾವು' ಪ್ರಕಟವಾಗುತ್ತಿದೆ. ಈ ಸಂಕಲನದಲ್ಲಿ ಹತ್ತು ಹನ್ನೆರಡು ವರ್ಷಗಳ ಹಿಂದೆ ಬರೆದ ಕವನಗಳೂ ಇವೆ; ಇತ್ತೀಚಿನವೂ ಇವೆ. ರಸಜ್ಞರು ಅವುಗಳನ್ನು ಪ್ರತ್ಯೇಕಿಸಿ ನೋಡಬಲ್ಲರು. ಇಲ್ಲಿ ಸಾಮಾಜಿಕ ಪದ್ಯಗಳೂ ಇವೆ, ಭಾವಗೀತೆಗಳೂ ಇವೆ. ಇವೆಲ್ಲಾ ಎಷ್ಟರಮಟ್ಟಿಗೆ ಯಶಸ್ವಿಯಾಗಿವೆಯೋ, ಸಹೃದಯರೇ ನಿರ್ಧರಿಸಬೇಕು.

ಈ ಸಂದರ್ಭದಲ್ಲಿ ನನ್ನ ಜೀವನಕ್ಕೆ, ಆ ಮೂಲಕ ನನ್ನ ಕಾವ್ಯ ಜೀವನಕ್ಕೆ ಆಸರೆಯಾಗಿ ನಿಂತಿರುವ ಗೆಳೆಯರನ್ನೆಲ್ಲ ನೆನೆಯುತ್ತೇನೆ.

ನನಗೆ ಹಿರಿಯರೂ ಉದಾತ್ತ ಕವಿಗಳೂ ಆದ ಶ್ರೀ ಪು. ತಿ. ನರಸಿಂಹಾಚಾರ್ಯರು ಈ ಸಂಕಲನಕ್ಕೆ ಮುನ್ನುಡಿ ಬರೆದು ಹರಸಿದ್ದಾರೆ, ಇನ್ನೂ ಅನೇಕ ರೀತಿಯಲ್ಲಿ ನನ್ನಲ್ಲಿ ಸ್ನೇಹವನ್ನೂ ವಿಶ್ವಾಸವನ್ನೂ ತೋರಿಸಿದ್ದಾರೆ. ಅವರಿಗೆ ನನ್ನ ಗೌರವ ಪೂರ್ವಕವಾದ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ. ಈ ಸಂಕಲನವನ್ನು ಪ್ರಕಟಿಸಿದ ಶ್ರೀ ಕೂಡಲಿ ಚಿದಂಬರಂ ಅವರಿಗೂ, ಇದನ್ನು ಇಷ್ಟು ಸುಂದರವಾಗಿ ಅಚ್ಚುಗೊಳಿಸಿದ ಗೆಳೆಯ ಜಿ. ಎಚ್. ರಾಮರಾಯರಿಗೂ ನಾನು ಕೃತಜ್ಞ.

ಮೈಸೂರು
೨೯–೯–೪೮

**ಎಂ. ಗೋಪಾಲಕೃಷ್ಣ ಅಡಿಗ**

ಈ ಕಾವ್ಯ ಸಂಕಲನವನ್ನು ಹಸ್ತಪ್ರತಿಯಲ್ಲಿ ನೋಡಿ, ಹಲವು ಸಲಹೆಗಳನ್ನಿತ್ತ ಶ್ರೀಮಾನ್ ತೀ. ನಂ. ಶ್ರೀಕಂಠಯ್ಯನವರಿಗೂ, ಇದನ್ನು ಕಾವ್ಯಾಲಯದಿಂದ ಪ್ರಕಟಿಸಲು ಅವಕಾಶವಿತ್ತ ಶ್ರೀ ಗೋಪಾಲಕೃಷ್ಣ ಅಡಿಗರಿಗೂ ಕೃತಜ್ಞನಾಗಿದ್ದೇನೆ.

**ಕೂಡಲಿ ಚಿದಂಬರಂ.**

# ವಿವರ


| | | |
|---|---|---|
| | ಮುನ್ನುಡಿ | iii |
| | ಬಿನ್ನಹ | vi |
| ೧. | ಕಟ್ಟುವೆವು ನಾವು . . . | ೧ |
| ೨. | ನಾವೆಲ್ಲರು ಒಂದೆ ಜಾತಿ . . . | ೪ |
| ೩. | ಒಳನುಡಿ . . . | ೬ |
| ೪. | ಮೋಹನ ಮುರಲಿ . . . | ೭ |
| ೫. | ವಿಜಯನಗರದ ನೆನಪು . . . | ೮ |
| ೬. | ನಮ್ಮ ಪೊಲವಿದು ನಿಜವು . . . | ೧೦ |
| ೭. | ನಮ್ಮ ಮನೋರಥ . . . | ೧೨ |
| ೮. | ಗುರಿ . . . | ೧೪ |
| ೯. | ಮನೆನೆರೆಯ ದೇಗುಲ . . . | ೧೫ |
| ೧೦. | ಸುಲಿಗೆಯೆಂಬ ಯಾಗ . . . | ೧೮ |
| ೧೧. | ನಾವು ನರರು . . . | ೨೨ |
| ೧೨. | ಸಾಹಸ ! . . . | ೨೩ |
| ೧೩. | ನೊಂದನುಡಿ . . . | ೨೫ |
| ೧೪. | ತೊರೆಗಳೆಲ್ಲ ಬರಲಿ ಬಿಡು ! . . . | ೨೮ |
| ೧೫. | ಸೇವೆ . . . | ೨೯ |
| ೧೬. | ಕೊರಗು . . . | ೩೧ |
| ೧೭. | ಚರಮಗೀತೆ . . . | ೩೩ |
| ೧೮. | ಮನೆ . . . | ೩೫ |
| ೧೯. | ಎದೆಯು ಮರಳಿ ತೊಳಲುತಿವೆ . . . | ೩೭ |
| ೨೦. | ಎಲೆ ಕವಿ ! . . . | ೩೮ |
| ೨೧. | ಯುಗಾದಿ . . . | ೩೯ |
| ೨೨. | ಇದು ಮೊದಲು . . . | ೪೧ |

| | | |
|---|---|---|
| ೨೩. | ಮಹಾಪೂರ | ೪೩ |
| ೨೪. | ಧೂಮಲೀಲೆ | ೪೪ |
| ೨೫. | ಸಮಾಜ ಭೈರವ | ೪೮ |
| ೨೬. | ನಂದಾದೀಪ | ೪೮ |
| ೨೭. | ಏಳುವುದೆಂದೀ ಜನಪದ | ೫೦ |
| ೨೮. | ಒಂದು ಸಂಜೆ | ೫೨ |
| ೨೯. | ಎಂದು ಕೊನೆ | ೫೩ |
| ೩೦. | ಆಲಸನ ಹಾಡು | ೫೫ |
| ೩೧. | ಹುತಾತ್ಮರನ್ನು ನೆನೆದು | ೫೭ |
| ೩೨. | ಸ್ವಾತಂತ್ರ್ಯ ಗೀತ | ೬೦ |
| ೩೩. | ಅತಿಥಿಗಳು | ೬೪ |
| ೩೪. | ಕಲ್ಕತ್ತೆಯಲಿ ಕಾಳಿ | ೬೮ |
| ೩೫. | ಯಾರಾದರು ನೀನಾಗಿರು | ೬೯ |
| ೩೬. | ಭಾರತದ ತಂದೆ ಗಾಂಧಿ | ೭೧ |
| | ಮೊದಲ ಚರಣಗಳು | ೭೮ |

# ಕಟ್ಟುವೆವು ನಾವು

ಕಟ್ಟುವೆವು ನಾವು ಹೊಸನಾಡೊಂದನು,—ರಸದ
ಬೀಡೊಂದನು.

ಹೊಸನೆತ್ತರುಕ್ಕುಕ್ಕಿ ಆರಿಹೋಗುವ ಮುನ್ನ,
ಹರೆಯದೀ ಮಾಂತ್ರಿಕನ ಮಾಟ ಮಸುಳುವ ಮುನ್ನ,
ಉತ್ಸಾಹಸಾಹಸದ ಉತ್ತುಂಗವೀಚಿಗಳ
ಈ ಕ್ಷುಬ್ಧ ಸಾಗರವು ಬತ್ತಿಹೋಗುವ ಮುನ್ನ
ಕಟ್ಟುವೆವು ನಾವು ಹೊಸನಾಡೊಂದನು!

ನಮ್ಮೆದೆಯ ಕನಸುಗಳೆ ಕಾಮಧೇನು
ಆದಾವು, ಕರೆದಾವು ವಾಂಛಿತವನು ;
ಕರೆವ ಕೈಗಿಹುದಿದೋ ಕಣಸುಗಳ ಹರಕೆ;
ಗುರಿ ತಪ್ಪದೊಮ್ಮುಖದ ಬಯಕೆ ಬೆಂಬಲಕೆ!

ಜಾತಿಮತಭೇದಗಳ ಕಂದಕವು ಸುತ್ತಲೂ
ದುರ್ಭೇದ್ಯವೆನೆ ಕೋಟೆಕೊತ್ತಲಗಳು ;
ರೂಢಿರಾಕ್ಷಸನರಸುಗೈಯುವನು, ತೋಳ್ತಟ್ಟಿ
ತೊಡೆತಟ್ಟಿ ಕರೆಯುವನು ಸಂಗ್ರಾಮಕೆ!

ನಾವು ಹಿಂದೆಗೆವೆವೇ? ವೀರತರುಣರು ನಾವು!
ಒಂದೆ ನೆಗೆತಕೆ ನೆಗೆವೆವೋ ಕಂದಕವನು,
ಕುಟ್ಟಿ ಪುಡಿಮಾಡುವೆವು ಕೋಟೆಗಳನು,
ಎದೆಯ ಮೆಟ್ಟಿ ಮುರಿಯುವೆವಸುರರಟ್ಟೆಗಳನು!

ಕೋಟೆಗೋಡೆಗೆ ನಮ್ಮ ಹೆಣಗಳೇ ಮೆಟ್ಟಿಲು,
ನಮ್ಮ ಸಾವೇ ನೋವೆ ಹೊಸನಾಡ ತೊಟ್ಟಿಲು
ಆದಾವು; ಅಂಜುವೆದೆ ನಮ್ಮದಲ್ಲ;
ಸೋಲುಬಗೆ ವೀರನಿಗೆ ಸಲ್ಲ, ಹೊಲ್ಲ!

ಎಡರುಗಳ ಕಡಲುಗಳನೀಸಿ ಬರುವೆವು, ಘೋರ
ನೈರಾಶ್ಯದಗ್ನಿಮುಖದಲ್ಲು ಕೂಡ
ಹೊಕ್ಕು ಹೊರಡುವೆವೆಲ್ಲ ತೊಡಕುಗಳ ಒಡಕುಗಳ
ಬಿಡಿಸಿ ಇಡಿಗೊಳಿಸಿ ಕಟ್ಟುವೆವು ನಾಡ!

ಇಂದು ಬಾಳಿದು ಕೂಳಕಾಳಗವು; ಹೊಟ್ಟೆಯೇ
ಕೇಂದ್ರವಾಗಿದೆ ನರನ ಜೀವಿತಕ್ಕೆ;
ಅನ್ನದನ್ಯಾಯದಾವಾಗ್ನಿಯಲಿ ಕರಗುತಿದೆ
ನರತೆ, ಸಂಸ್ಕೃತಿ, ಪ್ರೀತಿ, ದಿವದ ಬಯಕೆ!

ಇರುವೆಲ್ಲವನು ಎಲ್ಲ ಜನಕೆ ತೆರವಾಗಿಸುವ
ಸಮಬಗೆಯ ಸಮಸುಖದ ಸಮದುಃಖದ
ಸಾಮರಸ್ಯದ ಸಾಮಗಾನ ಲಹರಿಯ ಮೇಲೆ
ತೇಲಿ ಬರಲಿದೆ ನೋಡು, ನಮ್ಮ ನಾಡು!

ಇಲ್ಲೆ ಈ ಎಡೆಯಲ್ಲೆ, ನಮ್ಮ ಮುಂಗಡೆಯಲ್ಲೆ
ಅಳಲುಗಳ ಹೆಡೆಯಲ್ಲೆ
ಸೋಲುಗಳ ತೊಡೆಯಲ್ಲೆ
ಅರಳೀತು ನಮ್ಮ ನಾಡು;
ನಮ್ಮೆದೆಯ ತುಂಬಿರುವ ಅದರ ನರುಗಂಪು ಹೊರ
ಹೊಮ್ಮುವುದ ಕಾದು ನೋಡು!

ಉತ್ಸಾಹ ಉದ್ವೇಗ ಉದ್ರೇಕಗಳ ವೀರ
ಯುವಜನದ ನಾಡಗುಡಿಯು,
ಅದರ ಹಾರಾಟಕ್ಕೆ ಬಾನೆ ಗಡಿಯು,
ಬರಲು ಬಿಡೆವೆಂದಿಗೂ ಅದಕೆ ತಡೆಯು!
ತಡೆವವರು ಬನ್ನಿರೋ, ಹೊಡೆವವರು ಬನ್ನಿರೋ,
ಕೆಡೆನುಡಿವ ಕೆಡೆಬಗೆವ ಕೆಡುಕು ಜನರೇ ಬನ್ನಿ!

ಕೊಟ್ಟೆವಿದೊ ವೀಳೆಯವನು ;
ನಿಮ್ಮೆಲ್ಲರನು ತೊಡೆದು ನಿಮ್ಮ ಮಸಣದ ಮೇಲೆ
ಕಟ್ಟುವೆವು ನಾವು ಹೊಸನಾಡೊಂದನು,—ಸುಖದ
ಬೀಡೊಂದನು !

# ನಾವೆಲ್ಲರು ಒಂದೆ ಜಾತಿ

೧

ನಾವೆಲ್ಲರು ಒಂದೆ ಜಾತಿ, ಒಂದೆ ಮತ, ಒಂದೆ ಕುಲ ;
ನಾವು ಮನುಜರು ;
ನರರ ನಡುವಿನಡ್ಡಗೋಡೆಗಳನು ಕುಟ್ಟಿ ಕೆಡಹುವೆವು,
ನಾವು ವಿಲಯರುದ್ರರು !
ಹೊಸಬಾಳಿನ ಹೊಸಸಮತೆಯ ಸಮರಸವನು ಸಮೆವೆವು,
ನಾವು ನವವಿಧಾತರು !

೨

ಕ್ರಾಂತಿಪತಾಕೆಯು ಈ ನವೀನಯುಗದ ಜಗದ ಕೇತನ ;
ಅದರ ಕೆಳಗೆ ತಿಂತಿಣಿಸಿದೆ ಯೋಧವ್ಯೂಹ ನೂತನ :
ಎಲ್ಲೆಕಟ್ಟನೆಲ್ಲ ಮೆಟ್ಟಿ ಮುಂದೋಡುವ ಯುವಜನ.
'ಎಲ್ಲ ಒಂದೆ' ಎಂಬುದೊಂದೆ ನಮ್ಮ ರಣಕ್ರಂದನ !
ಹಳೆಯ ಕೊಳೆಯ ಕಳೆವೆವು,
ನವವ ಶುಭವ ಬೆಳೆವೆವು,
ದಿವವನಿಲ್ಲಿ ಈ ನೆಲಕೇ ಎಳೆದು ಸೆಳೆದು ತರುವೆವು,
ನಾವು ಸದಾ ತರುಣರು !

೩

ತೆರೆಬಾಗಿಲ ಹೊರನೋಟದ ಹೊರೆಹಸುರಿನ ಹಂದರ,
ನಮ್ಮ ಹೃದಯ ಮಂದಿರ ;
ಅಲ್ಲಿ ಎಲ್ಲ ಜನಕು ಇದೆ ಸ್ವಾಗತವು ನಿರಂತರ,
ಚಿರ ಉದಾರ ಸುಂದರ !
ಬನ್ನಿರಣ್ಣ ಬನ್ನಿರೆಲ್ಲ ಬಣ್ಣದಣ್ಣತಮ್ಮರು,
ನಡೆಯ ನುಡಿಯ ನೂರುಗೋಡೆಗೋಡೆ ನಿಮಿರಿ ನಿಂದರೂ
ನಾವೆಲ್ಲರು ಒಂದೆ ತಾಯ ಎದೆಯಾಸೆಯ ಕುಡಿಗಳು ;
ಒಂದೆ ಮಹಾಪ್ರೇಮಾಗ್ನಿಯ ಹೋಮಾಗ್ನಿಯ ಕಿಡಿಗಳು ;
ಭೂಮವಾವುದನ್ನೊ ಇಲ್ಲಿ ಬೆಳೆಯೆ ಬಂದ ಭೀಮರು,
ಪ್ರೇಮಸಿದ್ಧಿಗಾಗಿ ನೋನುತಿರುವ ಸತ್ಯಕಾಮರು !

ಕೈಕೈಗಳ ಕುಲುಕಿಸಿ,
ಎದೆಗೆದೆಯನು ಹಾಯಿಸಿ,
ಭೇದವೆಲ್ಲ ಸುಟ್ಟುರಿವೊಲು ಎದೆಯೊಲವನು ಕೆರಳಿಸಿ,
ತೊಳತೊಳಗುವ ನರತೆಯೆಂಬ ಬಂಗಾರವನರಳಿಸಿ
ಯುವಜನವಿದೊ ನವಜನವಿದೊ ದುಡುಕುತಿಹುದು ಮುಂದಕೆ,
ಪದಪದಕೂ ಯುಗಯುಗಗಳೆ ಸರಿಯುತಿರಲು ಹಿಂದಕೆ,
ಒಮ್ಮತದೊಗ್ಗಟ್ಟಿನ ಒಬ್ಬಗೆಬಾಳಿನ ಚಂದಕೆ !

೪

ಜಾತಿಮತದ ಗುಹೆಗಳಿಂದ ಹೊರಬನ್ನಿರಿ ಬಯಲಿಗೆ,
ಕೃತಕ ತಿಮಿರಬಾಳದಿಂದ ವಿಸ್ತಾರದ ಬೆಳಕಿಗೆ ;
ಸೇರಿಕೊಳಿ, ಕೂಡಿಕೊಳಿ, ಮುನ್ನುಗ್ಗುವ ಸಾಲಿಗೆ,
ಕತ್ತಲೊಡನೆ ಹೂಡಿದ ಈ ಉತ್ಸಾಹದ ದಾಳಿಗೆ ;
ಕೂಡಿಸಿರೆದೆ ಕೊರಲುಗಳನು ಹೊಸಬಾಳಿನ ಹಾಡಿಗೆ :
ನಾವೆಲ್ಲರು ಒಂದೆ ಜಾತಿ, ಒಂದೆ ಮತ, ಒಂದೆ ಕುಲ ;
ನಾವು ಮನುಜರು !
ಹೊಸಬಾಳಿನ ಹೊಸಸಮತೆಯ ಸಮರಸವನು ಸಮೆವೆವು,
ನಾವು ನವವಿಧಾತರು !

# ಒಳನುಡಿ

ಅಲೆಅಲೆಯಾಗಿ ಬಂದೊಲೆಯದೆ ತಂಗಾಳಿ?
ನೆಲೆಯಿಲ್ಲದಲೆಯದೆ ಜಲದ?
ಅಲರಲರನು ಸುತ್ತಿ ಮೊರೆಯದೆ ಮರಿದುಂಬಿ?
ತೊಳಲು, ತೊಳಲು ನನ್ನ ಮನವೆ!

ಒಂದು ತೊರೆಯ ನೀರೆ ಸಾಕೆನ್ನದಿರು; ಸಿಂಧು
ಸಿಂಧುವನೂ ಹೀರು, ಹೀರು.
ಒಂದಲರಿಗೆ ಸೆರೆಯಾಗದೆ ಹಲವಾರ
ರಿಂದ ಮರಂದವ ಮೋರು!

ಗೂಡೊಂದು ಬೇಕೆಂದು ಬೀಡೊಂದೆ ಸಾಕೆಂದು
ನಾಡಾಡಿ ನೀನಾಗಬೇಡ!
ಗೂಡುಗೂಡಿನ ಬೀಡುಬೀಡಿನ ಸೊಬಗಿನ
ಗಾಡಿಮೋಡಿಯೊಳೊಂದುಗೂಡು.

ತೊರೆತೊರೆಗಳ ನೀರು ಕುಡಿಕುಡಿಯೆಲೆ ಜಿಂಕೆ!
ಅಲರಲರನು ಹೀರು ಮಧುಪ!
ತೆರೆತೆರೆಗಳ ಕೂಡೆ ಸರಸವಾಡೆಲೆಗಾಳಿ!
ಫಲಫಲಗಳನುಣ್ಣು ವಿಹಗ!

ಅದನೊಲ್ಲೆ ಇದ ಸಲ್ಲೆನೆಂಬ ಸಣ್ಣೆದೆತನ
ತಿಳಿವು ಹೂವಿಗೆ ವಿಷಕೀಟ,
ಅದು ಸಿದ್ಧವಿದು ಬದ್ಧ ಎಂಬ ದುಡುಕುಮನ
ಬಗೆಯ ಬಾನಿಗೆ ಮುಗಿಲಾಟ.

ಅನ್ಯರ ನಡೆನುಡಿಗಳ ಟೀಕೆ ಬರೆವರೆ
ನಿನ್ನೊಳೇನಿದೆ ಅಧಿಕಾರ?
ನಿನ್ನೊಳಗಿನ ಕೊಳೆಕಸವನು ಕಳೆದೊಗೆ;
ಹಣ್ಣಿಸದೆಯ ಕಸುಗಾಯ!

ಕಂಡವರಾಡಿದ ಕೆಂಡನುಡಿಗೆ ಮಾ
ಕೊರ್ಗಂಡು ನೀನುರಿಗೊಳ್ಳಬೇಡ!
ಕೆಂಡವು ತಣಿದೀತು; ಗಂಡೆದೆ ಮಣಿದೀತು;
ಖಂಡಿತವೀ ಭವ ಗೂಢ!

ವಿಕಟನೆಂದನ್ಯರು ಜರೆದರು ಬೆದರದೆ
ಸುಖಸಾಧನೆಗೆ ಸಿದ್ಧನಾಗು;
ಅಕುಟಿಲ ಹೃದಯವೊಂದಿರೆ ಸಾಕು, ದಿವ್ಯ ಭಾ-
ವುಕರೆದೆಯನು ಬಗೆಗೊಳಲು!

ಅಂದಚಂದಗಳನು ಕೊಂಡುಕೊನೆದು ಭೂ
ನಂದನದಲಿ ನಲಿದಾಡು!
ಹಿಂದುಮುಂದಿನ ದಂದುಗವ ಮರೆತಾನಂದ
ದಿಂದಲಿ ಕೊರಲೆತ್ತಿ ಹಾಡು!

# ಮೋಹನ ಮುರಲಿ

ಯಾವ ಮೋಹನಮುರಲಿ ಕರೆಯಿತು ದೂರತೀರಕೆ ನಿನ್ನನು?
ಯಾವ ಬೃಂದಾವನವು ಸೆಳೆಯಿತು ನಿನ್ನ ಮಣ್ಣಿನ ಕಣ್ಣನು?

ಹೂವುಹಾಸಿಗೆ, ಚಂದ್ರ, ಚಂದನ, ಬಾಹುಬಂಧನ, ಚುಂಬನ;
ಬಯಕೆತೋಟದ ಬೇಲಿಯೊಳಗೆ ಕರಣಗಣದೀ ರಿಂಗಣ;

ಒಲಿದ ಮಿದುವೆದೆ, ರಕ್ತಮಾಂಸದ ಬಿಸಿದುಸೋಂಕಿನ ಪಂಜರ;
ಇಷ್ಟೆ ಸಾಕೆಂದಿದ್ದೆಯಲ್ಲೋ! ಇಂದು ಏನಿದು ಬೇಸರ?

ಏನಿದೇನಿದು ಹೊರಳುಗಣ್ಣಿನ ತೇಲುನೋಟದ ಸೂಚನೆ?
ಯಾವ ಸುಮಧುರ ಯಾತನೆ? ಯಾವ ದಿವ್ಯದ ಯೋಜನೆ?

ಮರದೊಳಡಗಿದ ಬೆಂಕಿಯಂತೆ ಎಲ್ಲೊ ಮಲಗಿದೆ ಬೇಸರ;
ಏನೊ ತೀಡಲು ಏನೊ ತಾಗಲು ಹೊತ್ತಿ ಉರಿವುದು ಕಾತರ:

ಸಪ್ತಸಾಗರದಾಚೆಯೆಲ್ಲೋ ಸುಪ್ತಸಾಗರ ಕಾದಿದೆ;
ಮೊಳೆಯದಲೆಗಳ ಮೂಕಮರ್ಮರ ಇಂದು ಇಲ್ಲಿಗು ಹಾಯಿತೆ?

ವಿವಶವಾಯಿತು ಪ್ರಾಣ; ಹಾ! ಪರವಶವು ನಿನ್ನೀ ಚೇತನ;
ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ?

ಯಾವ ಮೋಹನಮುರಲಿ ಕರೆಯಿತು ಇದ್ದಕಿದ್ದೊಲೆ ನಿನ್ನನು?
ಯಾವ ಬೃಂದಾವನವು ಚಾಚಿತು ತನ್ನ ಮಿಂಚಿನ ಕೈಯನು?

# ವಿಜಯನಗರದ ನೆನಪು

ಆರ್ನೂರು ವರ್ಷಗಳ ಜವನಿಕೆಯ ತೆರೆದು ನ-
ಮ್ಮಾ ರಾಜ್ಯದಾ ವಿಭವದುನ್ನತಿಯ ನೋಡು;
ಧೀರಗಂಭೀರತೆಯ, ತತ್ವಸತ್ವೋನ್ನತಿಯ
ವಾರಿನಿಧಿಯಲಿ ಮಿಂದು ಬಳಿಕ ಮುಂದೋಡು!

ಭಾರತವನಳುರಿ ಮುಸಗಿದ ಕಾಳಮೇಘಗಳ
ತೂರಿ ಬಂದುದು ಕನ್ನಡಿಗರಾತ್ಮತೇಜ;
ಬೀರಸಿರಿ ನಭವನಂಡಲೆದು ವಿಜಯಶ್ರೀಯು
ಸೇರಿ ಬಿತ್ತರಗೊಂಡುದೆಮ್ಮ ಸಾಮ್ರಾಜ್ಯ!

ಒಮ್ಮೆ ಭಾರತದ ಧರ್ಮಜ್ಯೋತಿ ನಂದುತಿರೆ
ನಮ್ಮ ರಕ್ತದ ತೈಲವೆರೆದು ಬೆಳಗಿಸಿದ
ಹೆಮ್ಮೆ ನಮಗುಂಟು; ಭಾರತದ ಸಂಸ್ಕೃತಿಗೆ ಕುಡಿ
ಹೊಮ್ಮಿಸಿದ ಬಲುಹುಂಟು ಸಿರಿಗೆ ಕನ್ನಡದ.

ನಮ್ಮ ಹೆಮ್ಮೆಯ ಮುಕುಟ, ಗಂಡುತನದೇರಾಟ,
ನಮ್ಮ ಸಂಸ್ಕೃತಿಕಲೆಗಳೊಂದು ಸವಿಯೂಟ;
ನಮ್ಮ ಬೆಳ್ಸಸದ ಗುಡಿ, ಸಾಹಸದ ತುತ್ತತುದಿ,
ನಮ್ಮ ಸ್ವತ್ವದ ಸತ್ವದುರಿ ವಿಜಯನಗರಿ!

ಕಾಡ ಹೊನಲಿದಿರು ಮುಳಲೊಟ್ಟಿಲಂತರಿಯದ
ಬ್ಬಾಳಿಕೆಗೆ ಭಾರತದ ಕೋಟಿಕೋಟಿಗಳು
ಬೀಳುತಿರೆ ನೆಲಿಗೆಟ್ಟು, ಪೌರುಷದ ಬಗೆಗೆಟ್ಟು
ಮೇಲೆದ್ದು ಬಂದ ಗಿರಿಯಿದು ವಿಜಯನಗರಿ!

ಇಂದು ಜಡತೆಯ ಹುದುಲೊಳಾಳ್ದ ಕನ್ನಡದ ಹೃದ
ಯಾಂಧಕಾರದಿ ವಿಜಯನಗರದಾ ನೆನಪು
ಬಂದೆಮ್ಮ ಧಮನಿಧಮನಿಯಲಿ ಧುಮುಧುಮಿಸಿದರೆ
ಬಂದೇ ಬರುವುದೆಮ್ಮ ಮುಂಬಾಳ್ಗೆ ಬೆಳಕು!

# ನಮ್ಮ ಹೊಲವಿದು ನಿಜವು !

ನಮ್ಮ ಹೊಲವಿದು ನಿಜವು ; ಬೆಳೆದುದು
ಬೆಳೆಯೊ ಕಳೆಯೋ ತಿಳಿವೆವೆ ?
ಕಳೆಯ ಕೀಳಲು ಬಯಸಿ ಬೆಳೆಯನೆ
ಕಳೆಯುವೆವೊ, ನಾವರಿತೆವೆ ?

ಕೆಲವರದು ಬೆಳೆ ಕೆಲವರಿದು ಕಳೆ
ಎಂದು ಕಲಿಸಲು ಬರುವರು.
ಹಲವರೇನನೊ ಬಿತ್ತಿ ನಲಿವರು ;
ಬೆಳೆದೆವೆಂದೇ ಮೊರೆವರು !

ಅವರಿವರ ಮಾತುಗಳ ಬಳಸಲು
ಬಾಳ ಹೊಲ ಬರಿ ಬಂಜರು ;
ಎದೆಯ ತಳದೊಳು ಬೆಳಕು ಹೊಳೆಯದು ;
ಕೊಲುತಿಹುದು ಹುಸಿಹಂಬಲು.

ಹರಕೆಗಳು ಹಲವಾರು ; ಬಾಳಿನ
ಮುಗಿದ ಕೈ ಮುಗಿದಂತಿದೆ ;
ವರದಹಸ್ತವ ಕಾಣೆನಕಟಾ !
ಜಗವು ನಗೆಮೊಗವಾಂತಿದೆ.

ಏನನಾದರು ಬೆಳೆವೆನೆಂದೀ
ಪ್ರಾಣ ತುಡಿಯುತಲಿರುವುದು ;
ಏನು ಬೆಳೆದರು ಬಾಳು ತುಂಬದು
ತಣಿಯದಯ್ಯೋ ತಣಿಯದು !

ಮುಗಿಲು ಬರುವುದು, ಮಳೆಯ ತರುವುದು ;
ಜಗವು ಹಸಲೆಯ ಹೊದೆವುದು ;
ಸೊಗದ ಬೆಳಸನು ಸೊಗಸಿನೆಸಳನು
ಬೆಳೆಯದೆದೆ ಹದಗೆಡುವುದು !

ಅಲರುಗಳು ಕಿಲಕಿಲನೆ ನಗುವುವು ;
ಬಳ್ಳಿಗಳು ತಲೆಯೊಲೆವುವು ;
ಹೊಲವು ನಮ್ಮದು ಹಲವು ಮುಳ್ಳಿನ
ಬಳ್ಳಿಯುಲಿ ತಲೆಗರೆವುದು !

ನಮ್ಮ ಹೊಲವಿದು ಸಹಜ. ಬೆಳೆವುದು
ಬೆಳೆಯೊ ಕಳೆಯೋ ತಿಳಿದೆವೆ ?
ಹೆಮ್ಮೆ ಹುಮ್ಮಸವೇಕೆ ? ನಿಜವನು
ಮರೆಸಿ ಬಾಳಲು ಬರುವುದೆ ?

# ನಮ್ಮ ಮನೋರಥ

ನಮ್ಮ ಮನೋರಥ ಊಹಾತೀತದ
ನಾಡಿಗು ದಾಳಿಯನಿಡುತಲಿದೆ;
ಜನ್ಮಮೃತ್ಯುಗಳ ಗುಹ್ಯಗಭೀರದ
ಆಳಕು ಇಳಿದೇನೆನ್ನುತಿದೆ.

ನಮ್ಮ ಬುದ್ಧಿ ಉದ್ಬುದ್ಧವಾಗಿ ಜಗ
ದುದ್ದ ಬೆಳಕನೇ ಬಿತ್ತುತಿದೆ;
ಮೂಲೆಮೂಲೆಗಳ ಕಳ್ಳಕತ್ತಲೆಯು
ನಟ್ಟನೆಟ್ಟ ಮುಂದೋಡುತಿದೆ!

ನೂರುಭಾವರಸದೆರಕವಾಗಿ ಎದೆ
ಮಾಗಿ ಬಾಗಿ ಸೀರಾಗುತಿದೆ;
ಕರುಣರಸದ ಸಾಗರ ತರಂಗತತಿ
ಎಲ್ಲ ಕಡೆಗು ಹರಿಹಾಯುತಿದೆ.

ಇಂತಾಗಿ ಕೂಡ ಎದೆ ಮಾಗಿ ಕೂಡ ಮತಿ
ಮಸೆದು ಕೂಡ ನಮಗೆ
ಬರಲಿಲ್ಲ ತಣಿವು; ಈ ಬಾಳ ದಣಿವು
ತವಲಿಲ್ಲ ಇನ್ನುವರೆಗೆ.

ಮುಗಿಲ ಮಲ್ಲಿಗೆಯು ಕಂಪನುಂಡ ಮನ
ಇಲ್ಲಿ ಹಲವು ಉಂಟು;
ಅದ ತಂದ ಗಾಳಿಗೂ ಬಂದ ಬಾಳಿಗೂ
ಎಂಥ ಯಾವ ನಂಟು ?

ಮತಿಯಲ್ಲಿ ಇದ್ದು ಕೃತಿಯಲ್ಲಿ ಅದರ ಕರಿ-
ನೆಳಲು ಕೂಡ ಇಲ್ಲ ;
ಗತಿಯಲ್ಲಿ ಇದ್ದ ರತಿ ಸುಗತಿಯಲ್ಲಿ, ಹಾ,
ನಸುವು ಕಾಣಲಿಲ್ಲ !

ಹಸಿವೆಬೆಂಕಿಯಲಿ ನರತೆ ಸುಟ್ಟು ಬರಿ
ಬೂದಿಯಾಗುವಂಥ
ನೂರುಜನದ ದಣಿವಿಂದಲೊಬ್ಬ ತಣಿ
ವಂಥ ಈ ದುರಂತ

ಕೊನೆಗಾಣಲಿಲ್ಲ ; ಯುಗಯುಗವು ಕಳೆದರೂ
ಅನ್ನದೊಂದು ಭಯವು
ಕಳೆಯಲಿಲ್ಲ ; ಅದರಿಂದೆ ಬಹುದು ಕಲಿ—
ಗಿಲೆಗೆ ಕೊನೆಗೆ ಲಯವು !

ನರಲೋಕಕೆಲ್ಲ ಇದೆ ; ಇಲ್ಲ ಇರುವುದನು
ಹಂಚಿಕೊಂಬ ನಯವು ;
ಮೂಡಲಿಲ್ಲ ಧೀಮಂತರಲ್ಲು ಇನಿ
ತೊಂದು ದಾರ ದಯವು !

ನಮ್ಮ ಮನೋರಥ ಊಹಾತೀತದ
ನಾಡಿಗು ದಾಳಿಯನಿಟ್ಟೀತು ;
ತನ್ನ ನೆರೆಯ ಉರಿಬೆಂಕಿ ತಟ್ಟೆ ಅದು
ಇಂದೊ ನಾಳೆಯೋ ಸುಟ್ಟೀತು !

# ಗುರಿ

ಅಳಿಯಾಸೆಗಳ ಸುಳಿಗೆ ಸಿಲುಕಿದೆಲೆ ಮನವೇ!
ನೆಲೆಯಿರದೆ ತೊಳಲುವುದು ಮನುಜ ಜೀವನವೇ?
ನನೆಬೇಕು, ಕೊನೆ ಬೇಕು ನರನ ಬಾಳುವೆಗೆ,
ದಿನದ ಗೈಮೆಯ ಹೂವು ಫಲಿಸಿ ಬರುವುದಕೆ.

ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ,
ಮಿಸುಪ ರವಿಕಿರಣಗಳ ಸಿರಿಗೆ ಮರೆದಾಡಿ,
ಮಸಗುವಂಬುಜದಂತೆ ಧ್ಯೇಯದಾಳ್ವಿಸಕೆ
ಬಸವೂಗು, ಬಂದ ಮನುಜತೆಯ ಸಾರ್ಥತೆಗೆ.

ಗಾಳಿ ಬಂದೆಡೆ ತಿರುಗುವಾ ಹೇಡಿತನವು,
ದಾಳಿ ಬಂದೊಡನೆ ಶರಣೆಂಬ ಹೆಣ್ತನವು.
ಬೇಡ ! ಹಿಡಿದೊಳ್ದಾರಿಯೊಳು ಕೊನೆಯ ವರೆಗೆ
ದೂಡು ಬಾಳ್ವೆಯನು ಪೌರುಷದ ಹೊನಲೊಳಗೆ !

ಒಂದು ಬಾಣಕೆ ಗುರಿಯು ಹಲವಿರುವುದುಂಟೆ ?
ಒಂದು ದೇಹದೊಳಾತ್ಮವೆರಡಿರುವುದುಂಟೆ ?
ಒಂದು ಜೀವನಕೇಕೆ ಹಲವು ಸಾಧ್ಯಗಳು ?
ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು!

ನರನೊಳಗೆ ನಾರಾಯಣನ ರೂಪು ಕಂಡು,
ತಿರೆಯೊಳಗೆ ಸುರಪುರದ ವೈಸಿರಿಯನುಂಡು
ಪರಹಿತಕೆ ಬಳಲುತಿರಲದುವೆ ಜೀವನವು ;
ಪೆರತೇನನೆಸಗಿದರು ನಮಗೆ ಲಾಂಛನವು !

# ಮನೆನೆರೆಯ ದೇಗುಲ !

ಮನೆನೆರೆಯ ದೇಗುಲದ
ತನಿಸೊಗದ ಸಾಗರದ
ನೆನಹು ಬಗೆಗಣಿಯ ಮಣಿಯಂತಿರುವುದು.
ದಿನದಿನದ ಯೋಚನೆಗೆ
ದಣಿದ ವೈಮನಗಳಿಗೆ
ದಿನದಿನಕೆ ಹೊಸಹುರುಪನೀಯುತಿಹುದು.

ಮರೆವುಗತ್ತಲೆಯ ಬಿ
ತ್ತರದೊಳಿದೊ ತಿರುತಿರುಗಿ
ಮಿರುಮಿರುಗಿ ಮಿಂಚುತಿಹುದದರ ನೆನಪು.
ಬರಲಿರುವ ಬಾಳುವೆಗೆ
ಸೆರೆಯಾದ ಭಾವನೆಗೆ
‘ ತಿರುಗು ಹಿಂದಕೆ! ’ ಎಂದು ತಿವಿಯುತಿಹುದು !

ಹರಿವ ಹೊಳೆ ತಾ ಹುಟ್ಟಿ
ಬರುವ ಬುಗ್ಗೆಯ ಬಗೆಗೆ
ಹೊರುವ ಋಣಭಾರಕೆನಿತಿಹುದೊ ಲೆಕ್ಕ,
ಸರಿದೆನ್ನ ಜೀವನವ
ಹೊರೆದು ರೂಪಿಸಿದೊಂದು
ಸಿರಿತಾಣಕನಿತೆನ್ನ ಋಣದ ಲೆಕ್ಕ.

ಅಲ್ಲಿರುವ ಕಲ್ಲಿನಲಿ
ಹುಲ್ಲಿನಲಿ ಮಣ್ಣಿನಲಿ
ಅಲ್ಲಿರುವ ಮಲ್ಲಳಿಯ ಹಾಡುಗಳಲಿ
ಮೆಲ್ಲೆಲರ ಸುಳಿವಿನಲಿ
ಹಲ್ಲಿ ಜೇನ್ನೊಣಗಳಲಿ
ಎಲ್ಲೆಲ್ಲಿಯೂ ಸೂಸುತಿಹುದು ಶಾಂತಿ.

ಶಾಂತಿರಸದಲಿ ಮುಳುಗಿ
ಸಂತೋಷ ಸಾರದಲಿ
ಸಂತತಂ ಸಮರಸತೆಗೊಂಡು ಮೆರೆದು
ಅಂತರಂಗದ ಮಿಡುಕ
ನಂತಗೊಳಿಸುತೆ ಭಾವ
ತಂತ್ರಿಯೊಳು ಮಿಡಿಯುವುದುದಾತ್ತತೆಯನು.

ಕಲಹಕಪಟದ ಕಿಲುಬು
ಬೆಳೆದು, ಸ್ವತ್ವದ ಹೊಲಬು
ತಿಳಿಯದಂತಿರ್ದು ಮಸಣಿಸಿದ ಮತಿಗೆ
ಹಲವು ದೋಹಳದ ಕಿರು
ಕುಳಗಳನು ಕಳೆದು ಮುಂ
ದೆಳೆದಿಹುದು ಸತ್ಫಲೋದ್ಯಮದ ದೆಸೆಗೆ.

ಹೊಸ ಮುಗುಳ ಹಸದನದ
ಹಸುರೆಲೆಯ ತೋಹುಗಳು
ಮುಸಗಿ ಬಾಸಣಿಸಿಹುವು ನಾಲ್ಕು ದೆಸೆಗೆ;
ಹಸರಿಸಿದ ತಣ್ಣೆಳಲೊ
ಳುಸಿರಳಿದ ಮೌನದಿಂ
ದೆಸೆಯುತಿರುವೀ ಪುಣ್ಯವೀ ತಾಣಕೆ.

ಇಲ್ಲಿ ನನ್ನೀ ಬಾಳು
ಅಲ್ಲಿನಾ ಬಾಳುವೆಯ
ಬಳ್ಳಿಯಲಿ ಚಿಗಿತ ಫಲದಂತಿರುವುದು.
ಅಲ್ಲಿನಾ ನೆನಪೊಂದೆ
ಇಲ್ಲಿನೀ ಬಾಳುವೆಯ
ಬಳ್ಳಿಗಾಧಾರವೆನೆ ನಿಂತಿರುವುದು.

ಎಂದೆನ್ನ ಮನೆನೆರೆಯ
ಮಂದಿರಕೆ ತೆರಳುವೆನೊ,
ಎಂದದರ ತಳ್ಕಿಗಾಂ ಮರಳಲಿಹೆನೋ—
ಎಂದೆನ್ನ ಜೀವ ಕಡು
ನೊಂದು ಹಾತೊರೆಯುತಿದೆ :
ಎಂದದರ ತಳ್ಕಿಗಾಂ ಮರಳಲಿಹೆನೋ !

# ಸುಲಿಗೆಯೆಂಬ ಯಾಗ

೧

ಸ್ವಾರ್ಥದ ವೇದಿಕೆಯಲಿ ನಿರ್ದಯತೆಯ
ಯಜ್ಞಕುಂಡ ಹೂಡಿ,
ವಿಷಯವಿಲಾಸದ ಬೆಂಕಿಯೊಟ್ಟಿದರು
ಭೋಗದಾಜ್ಯ ನೀಡಿ,
ಸುಲಿಗೆಯಾಗವನು ಯಜಿಸಿದರೀ ಭೂ-
ಯಜ್ಞಶಾಲೆಯಲ್ಲಿ
ಗುರುಗಳು, ರಾಜರು, ವಣಿಜರು ; ದುರ್ಬಲ
ದೀನ ಮಾನವಾಳಿ
ಧರ್ಮಶಾಸ್ತ್ರಗಳ ಮಧ್ಯ ಕುಡಿದು ಮೈ
ಮರೆಯಿತು ಪಶುವಾಗಿ ;
ಯೂಪಸ್ತಂಭವೆ ದೇವರ ಬಿಂಬವೆ
ಎಂದು ಭ್ರಮಿಸಿ ಬಾಗಿ ;
ಕೊರಲನಿರಿದರೂ ಕೆರಳಲಿಲ್ಲ ; ನೆ
ತ್ತರನೆ ಹೀರಿ ಹೀರಿ
ಊದಿಕೊಂಡರೂ ಒದೆಯಲಿಲ್ಲವೋ
ಧರ್ಮವಾಕ್ಯ ಮೀರಿ !

೨

ವಿಧಿನಿಷೇಧಗಳ ಕಟ್ಟುಕಟ್ಟಳೆಯ
ದೊಡ್ಡಿಯನ್ನು ತೆರೆದು,
ಜಾತಿನೀತಿಗಳ ಮುಳ್ಳುಬೇಲಿಯನು
ಸುತ್ತುಮುತ್ತು ಬಿಗಿದು,
ದೀನದಲಿತ ನರಪಶುಸಂಘಾತವ
ಒಳಗೆ ಕೂಡಿಸಿಟ್ಟು,
ಅರಸುತನದ ಹಿರಿಗಾವಲಿಟ್ಟು ಕುಣಿ
ಕುಣಿದರು ಮೈಬಿಟ್ಟು !

ಕವಿ ಗಮಕಿ ವಾದಿ ವಾಗ್ಮಿಗಳು ಗಾಯಕರು
ಯಾಗಭೂಮಿಯಲ್ಲಿ
ನೆರೆದರು–ಶಾಸ್ತ್ರಕೋವಿದರು, ಪಂಡಿತರು
ಸುಲಿಗೆಯಾಗದಲ್ಲಿ
ಮೆರೆದರು ಪಾಂಡಿತ್ಯವನು ಪ್ರತಿಭೆಯನು;
ದೇವಧರ್ಮ ಕಲೆಯು
ಇಂದ್ರಜಾಲವನು ಹರಹಿ ಕರೆದರೋ
ದೇವದೇವತೆಗಳ;
ಸುರರು ತಣಿದು ಕಳುಹಿದರು ನಂದನವ
ನೀ ನರಾಧಿಕರಿಗೆ;
ನರಕವೊಂದನಣಿಗೊಳಿಸಿ ಕೊಟ್ಟರಾ
ನರವರಾಕಗಳಿಗೆ!

೩

ಕಡಲಿನ ಮುಗಿಲಿನ ಅಂದವ, ಚಂದವ,
ಮಳೆಬಿಲ್ಲಿನ ಚೆಲುವ,
ದೇವಮಾನವರ ಪ್ರಣಯೋಲ್ಲಾಸವ,
ಕೋಗಿಲೆಯಿಂಚರವ,
ಮಧುಮಾಸದ ಮೃದುಹಾಸ್ಯವ, ಲಾಸ್ಯವ,
ಋತುಗಳ ರಿಂಗಣವ,
ಭಾವಭಾವಗಳ ತುಮುಲವ, ಕಾವ್ಯಕ
ಲಾವಳಿಗಳ ನಲವ,
ತತ್ವಜ್ಞಾನದ ಶಾಂತಿಯು, ಕಾಂತಿಯು,
ಸಂಸ್ಕೃತಿಗಿರಿಶಿರವ,
ಪ್ರತಿಭೆಯ ಮಿಂಚನು, ಬುದ್ಧಿಯ ಹೊಂಚನು,
ವಿಜ್ಞಾನದ ಬಲವ,
ಕಂಡು ಉಂಡವರು ಹತ್ತುಮಂದಿ; ಉಳಿ
ದವರು ಲಕ್ಷಲಕ್ಷ

ನರಕುರಿಗಳು, ಅರಸಿಕರು, ಕುತ್ಸಿತರು !
ಅವರ ಬಾಳ ಅಕ್ಷ
ಸುತ್ತುತಲಿದೆ ಕೊಳೆಕಸಗಳಲ್ಲಿ ಮನೆ
ಯೆಂಬ ಬಿಲಗಳಲ್ಲಿ ;
ಅಜ್ಞಾನದ ಕಾರ್ಗತ್ತಲಲ್ಲಿ ಬಾ
ಳೆಂಬ ಸಾವಿನಲ್ಲಿ ;
ನೈರಾಶ್ಯದ ಕಾಳ್ಗಿಚ್ಚಿನಲ್ಲಿ ತಣಿ
ವಿರದ ದಣಿವಿನಲ್ಲಿ !

೪

ಸುಖಗಿರಿಶೃಂಗಸ್ಥಿತಿಗೆ ನಲಿವವರ
ಕಣ್ಣು ಬಾನಿನತ್ತ ;
ಕೆಳಗೆ ಅದರ ಹೊರೆ ಹೊತ್ತು ನಿಂತವರು
ಕೋಟಿ ಕೋಟಿಮಾತ್ರ !
ಮೂಕ ವೇದನೆಯ ಶೋಕ ತುಂಬಿ ತುಳು
ಕಿದರು ಜಗವನೆಲ್ಲ,
ಸುಲಿಗೆಗಾರರದ ಕೇಳಲಿಲ್ಲ ; ಎದೆ
ಕರಗಲಿಲ್ಲ, ಇಲ್ಲ ;
ಇಟ್ಟಿರುವ ದೊಡ್ಡಿ ಕಟ್ಟಿರುವ ಬೇಲಿಗಳು
ನಸುವು ಅಲುಗಲಿಲ್ಲ !

೫

ಧರ್ಮದ ತೆರೆಮರೆಯಲ್ಲಿ ನಡೆವ ನರ-
ಹಿಂಸೆ ಇನ್ನು ಸಾಕು ;
ಮನುಜಹೃದಯ ಅನ್ಯಾಯರಾಕ್ಷಸನ
ಗೆದ್ದು ಬದುಕಬೇಕು !
ಅನ್ನವೆಲ್ಲ, ಚೆಲುವೆಲ್ಲ, ಎಲ್ಲ ಸುಖ,
ಎಲ್ಲ ಎಲ್ಲ ಬೆಳಕು
ಎಲ್ಲ ಜನಕು ತೆರವಾಗಬೇಕು: ಮಿಗಿ
ಲುಂಟೆ ಗುರಿಯು ಇದಕು ?

ಒಂದೆ ಕೊರಲಿನಲಿ ಕೂಗಿರಣ್ಣ : ' ಓ
ಸುಲಿಗೆಯಾಗ ಸಾಕು !
ಇದೊ ಅಣ್ಣತಮ್ಮ; ಇಕೊ ಅಕ್ಕತಂಗಿ; ಸಮ
ಭಾವ ಬೆಳೆಯಬೇಕು !
ಈ ನರಕ ಸಾಕು ; ಆ ನಾಕ ಬೇಕು ; ಅದ
ಕಾಗಿ ದುಡಿಯಬೇಕು.
ಇಂದಲ್ಲ ನಾಳೆ ಅದು ಬಂದೆ ಬರುವುದದ
ಕಾಗಿ ಮಡಿಯಬೇಕು !

# ನಾವು ನರರು !

ಸೊಕ್ಕುತಲೆಯ ರೆಕ್ಕೆ ಬಲಿಯ—
ದೂದಿ ನಿಂತ ಕೀಟ
ನಾವು ನರರು ; ನೂರು ಕನಸು
ಕುಣಿವ ದಾರುಪೀಠ !

ಇರುವ ಮೂರು ದಿನಕೆ ನೂರು
ಕಲಹ, ಕರುಬು, ಕಾಟ ;
ನೂರು ಹಸಿವು, ನೂರು ದಾಹ,
ವಿಷಯದೆಂಜಲೂಟ.

ಸ್ವಾರ್ಥದ ಸೆರೆಮನೆಯಲ್ಲಿಯೆ
ಒಲಿವ, ನಲಿವ ಬೇಟ ;
ಎದೆಗು ಎದೆಗು ನಡುವೆ ಕಡಲು !
ಎಂಥ ಹೃದಯ ಕೂಟ !

ಒಂದೆ ಬೆದೆಗೆ ನೂರು ತರದ
ಕಾಳ ಬೆಳೆವ ಹೂಟ ;
ಬಂಜೆ ಹೂವು ಬರಿಯ ನೋವು
ಬೆಳೆಯುವಂಥ ತೋಟ.

ಎದೆಯು ಬರಿದು, ಬಾಳು ಬರಿದು,
ಬರಿದು ನಮ್ಮ ನೋಟ ;
ಅಳುವು ನಗುವು, ಸರಸ ವಿರಸ
ಕಣ್ಣುಮುಚ್ಚಲಾಟ.
ಸಾವಿನೆಡೆಗೆ ಅಂತು ಇಂತು
ನಮ್ಮ ಬಾಳಿನೋಟ !

# ಸಾಹಸ !

ಸಾಹಸವೆ ಬಾರ ! ಸತ್ಪ್ರೋನ್ನತಿಯ ಸಿಂಗಾರ ;
ಸಾಹಸವೆ ಬಾರ, ಭಾಗ್ಯೋದಯದ ಹರಿಕಾರ ;
ಜೀವನದ ದಾಹವನು ಕಳೆವಮೃತಸಾರ,
ಸಾವುನೋವುಗಳನಿಳಿಗೈವ ಹೂಂಕಾರ !

ಮನುಜತೆಯ ಮಲರ ಮುಗಿದೆಸಳುಗಳನರಳಿಸುತ,
ತನಿಗಂಪು ಹನಿಜೇನ್ಗಳನು ಜಗಕೆ ಚಿಮ್ಮಿಸುತ
ಬಾರ, ನವಜೀವಿತ ಪ್ರತ್ಯೂಷಕಾಲ,
ಬಾರ, ನವ್ಯೋತ್ಸಾಹ ಸಂತೋಷಜಾಲ !

ಬೇಸಗೆಯ ಬಿಸಿಲ ಬೇಗೆಗೆ ಗಾರುವಡೆದಿಳೆಗೆ
ಬೇಸುರಿಯ ತಣಿಸಿ ಸುರಿಸುರಿವ ವೃಷ್ಟಿಯ ಹಾಗೆ
ನೈರಾಶ್ಯದಗ್ಧ ನರಹೃದಯನಂದನಕೆ
ಬಾರ, ಹೊಸಬೆಳೆಯ ನವಕಳೆಯನೀವುದಕೆ !

ಕಾಡುಮೇಡುಗಳ ಗಹ್ವರಕೋಟರಂಗಳಲಿ
ಬೀಡುಗೊಂಡಿರ್ದು, ಪಶುತೆಯ ಪಂಕದಾಳದಲಿ
ಕೆಡೆದ ಮನುಜತೆಯನೆತ್ತಿದ ಮಹಾಶಕ್ತಿ ;
ನಡಸು ಋಜುಮಾರ್ಗದಲಿ ಸತ್ಯದ ಗಭಸ್ತಿ !

ರೆಕ್ಕೆಯಿಲ್ಲದ ಹಕ್ಕಿಯಂತೆಲರಿನುಯ್ಯಲೆಗೆ
ಸಿಕ್ಕದ ಮುಗಿಲ್ಗಳೊಲು ಸಾಹಸದ ಸಿರಿಯೊಸಗೆ
ಬಿತ್ತರಿಸದಿಹ ಮನುಜರಾಶೋತ್ತರಗಳು
ಸತ್ತು ಹುಟ್ಟುತೆ ನೋವನೀವಪತ್ಯಗಳು !

ಪೌರುಷದ ಕಿಡಿಯನುಜ್ಜ್ವಳಿಪ ಜಂಝಾವಾತ,
ಭೀರುತೆಯನುಧ್ವಸ್ತಗೊಳಿಪ ವಜ್ರಾಘಾತ,
ಆತ್ಮವಿಶ್ವಾಸವಹ್ನಿಯ ಮಹಾಜ್ವಾಲೆ,
ಕೀರ್ತಿದೇವಿಗೆ ಕೋದ ನವ ಪುಷ್ಪಮಾಲೆ !

ಸಾಹಸವೆ ಸಫಲತೆಯ ಮಂಗಳದ ಮುಂಬೆಳಗು,
ಸಾಹಸವೆ ಸಂಸ್ಕಾರ ಭೈರವನ ನಿಡುಮೊಳಗು!
ವಿಧಿಯ ರಾಜ್ಯದ ಕಠೋರ ಕ್ರಾಂತಿಕಾರಿ!
ಹೃದಯ ರಾಜ್ಯದ ಚಿರಂತನ ವಿಜಯ ಭೇರಿ!

ಭಾರತದೊಳಿಂದು ಜಾಡ್ಯದ ಮಂಜು ಮುಸುಕಿಹುದು;
ಪಾರತಂತ್ರ್ಯದ ಘೋರತಿಮಿರ ಘೂರ್ಣಿಸುತಿಹುದು;
ಬಾರ, ಕರ್ತೃತ್ವಶಕ್ತಿ ಜ್ಯೋತಿಧಾರಿ;
ಬಾರ, ಪರತಂತ್ರಬಂಧನ ಮುಕ್ತಿಕಾರಿ!

ಭಾರತದ ನಾಡಿನಾಡಿಯ ಧಮನಿಧಮನಿಯಲಿ
ಸೇರುತಂಗಾಂಗಗಳ ರಕ್ತಕಣಕಣಗಳಲಿ
ಮೊರೆಮೊರೆದು ಭೋರ್ಗರೆದು ಬೇಗ ಬಳಿಸಾರ,
ತೆರೆನೊರೆಯನುಕ್ಕಿಸುತ ಸಾಹಸವೆ ಬಾರ!

ಸಾಹಸವೆ ಬಾರ! ಸತ್ಪ್ರೋನ್ನತಿಯ ಸಿಂಗಾರ,
ಸಾಹಸವೆ ಬಾರ, ಭಾಗ್ಯೋದಯದ ಹರಿಕಾರ!
ಜೀವನದ ದಾಹವನು ಕಳೆವಮೃತಸಾರ,
ಸಾವು ನೋವುಗಳನಿಳಿಗೈವ ಹೂಂಕಾರ!

# ನೊಂದನುಡಿ

ಈ ಹುರುಪುಜವ್ವನದ ಸಿರಿಯುಗುವ ಬಾಳ್ವಿಯನು
ಸಾಹಸಕೆ ಜೊತೆಗೊಳಿಸದಿರ್ಪುದುಂಟೆ ?
ಬಾಹುಲತೆಯನು ಕೀರ್ತಿವಧುವಿನ ಲತಾಂಗದಾ
ತೋಹಿನೊಳು ತೊನೆತೊನೆಸದಿರ್ಪುದುಂಟೆ ?

ಬಿಸಿನೆತ್ತರಿನ ಹರೆಯದುಬ್ಬಾಳುಗಳ ಮನದಿ
ಪಸರಿಸಿದ ಜಾಡ್ಯವನು ಕಳೆವುದೆಂತು ?
ಕೆಸರಿನಾಳಕೆ ಕೆಡೆದ ತುಂಬಿಮರಿಗಂಬುಜದ
ಹೊಸಜೇನ ಸವಿವಾಸೆ ಸಲುವುದೆಂತು ?

ಕಂದುತಿರುವೀ ಸ್ವಾಭಿಮಾನದಮಲಜ್ಯೋತಿ
ಗಿಂದು ನವತೈಲವಂ ಸುರಿವರಾರು ?
ನಂದುತಿರ್ಪಾತ್ಮಶಕ್ತಿಯ ಕಿಡಿಗಳಂ ಸ್ಫುರಿಸು
ತಿಂದೊಲಿದು ಸೂಜ್ವಲಂಗೊಳಿಪರಾರು ?

ತನ್ನ ತಾಯ್ನಾಡ ಸೇವೆಗೆ ತನುವನೀವುದರಿ
ನುನ್ನತಿಯ ಪಡೆವೆನೆಂದೆಣಿಪರಾರು ?
ಚೆನ್ನೆಯರ ನಲ್ತೋಳ ಬಿಗುಹಿನಲಿ ಮೈಮರೆವ
ಜನ್ಮವಿದು ವಿಫಲವೆಂದರಿವರಾರು ?

ಹರೆಯವಿದನಿಂತು ವಿಷಯಾವಳಿಯ ಸೇವನೆಗೆ
ತೆರವುಮಾಡುವ ಮರುಳ್ಗೆಲಸವುಂಟೆ ?
ಪರಿಣಾಮಭೀಕರವಿದೆಂದು ತಿಳಿಯದೆ ಭೋಗ
ದುರಿಗೆ ಸರ್ವಸ್ವವಂ ಸುರಿವುದುಂಟೆ ?

ಒಂದು ಸತ್ಕಾರ್ಯ ಅದನೊಂದಕುಂಚಿತ ಧೈರ್ಯ
ದಿಂದೆಸಗಲಳುಕದೆದೆ ಇರ್ಪುದೆನಿತು ?
ನೊಂದವರ ಬೆಂದವರ ಸೇವೆಯೊಳು ಸಂಸೃತಿಯ
ಬಂಧವನು ಹರಿದೊಗೆಯುತಿರ್ಪರೆನಿತು ?

ಸಂಕಲೆಯೆ ಕೈಗೆ ತೊಡವಾತ್ಮಕ್ಕೆ ಪರರಾಯ
ರಂಕೆಯೇ ತೊಡವು, ಹೃದಯಾಂಗಣಕ್ಕೆ
ಶಂಕೆ ಹೆಂಬೇಡಿತನಗಳ ತೊಡವು, ತೊತ್ತುಗೆಲ
ಸಂ ಕುಲದ ಬಿರುದಾಯ್ತು ನಮ್ಮ ಜನಕೆ!

ಒಂದು ಕಡೆ ಬಡತನದ ಘೋರಾಗ್ನಿಕುಂಡವಿದೆ
ಮುಂದುವರಿವರ ಸುಟ್ಟು ಸೂರೆಗೊಳಲು;
ಒಂದು ಕಡೆಯಲಿ ದಾಸ್ಯದುರ್ಲಲಿತಲಾಸ್ಯವಿದೆ
ಮಂದಿಗಳ ಮನುಜತೆಯ ಮರೆಗೊಳಿಸಲು.

ನಿರಭಿಮಾನದ ದಾಸ್ಯಜೀವನದ ಈ ವನದ
ಸೆರಗಿನಲಿ ಮರೆಯಾಗಿ ನಿಖಿಲಜನತೆ
ಮಿರುಪ ರವಿಕಿರಣಗಳ ಸರಣಿಯನು ಕಾಣದಿದೊ
ಮುರುಟುತಿದೆ ನಿದ್ದೆಯಲಿ ಕನವರಿಸುತೆ!

ಹೊಸತನದ ಗಾಳಿ ಸುಮ್ಮನೆ ಸುಳಿದು ಹೋಗುತಿದೆ;
ಪಸರಿಸಿದೆ ಇದೊ ಮಸಣದುಗ್ರಶಾಂತಿ,
ಬಿಸುಗದಿರನುದಯದಗ್ಗದ ಸೊಬಗು ಜನರ ದೃ
ಗ್ವಿಷಯವಾಗದೆ ಸಾಗುತಿಹುದು ಬರಿದೆ!

ಹಕ್ಕಿಗಳ ಚಿಲಿಪಿಲಿಯನಿಂದು ಕೇಳುವರಾರು?
ಸೊಕ್ಕುದುಂಬಿಗಳುಲಿ ಅದಾರ್ಗೆ ಸೊಗಸು?
ಉಕ್ಕುವೀ ಹಗಲ ಸಿರಿಯನು ಕಾಣದೊರಗಿದ ಜ
ನಕ್ಕೆ ಶುಭವಪ್ಪುದೇ?—ಬರಿಯ ಕನಸು!

ಅಂದಿನಾಧ್ಯಾತ್ಮಿಕದ ಹೊಳಹು ನೀತಿಯ ಬಲುಹು
ಅಂದಿನಾರ್ಪಟು ಸಾಹಸ ಶೌರ್ಯವು
ಸಂದು ಹೋದುವು; ಪಶುತ್ವವನೈದಿ ಜನತೆ ವಿಷ
ಯಾಂಧಕಾರದೊಳಿಂದು ತಾರುತಿಹುದು.

ಇಲ್ಲಿ ನರರಿಲ್ಲ ; ನರಕುರಿಗಳಲ್ಲದೆ ತೋರ
ದಿಲ್ಲಿ ಕೆಚ್ಚೆದೆಯ ಪಟುಭಟರ ನೆರವಿ ;
ಇಲ್ಲಿ ಘೋರಸ್ವಾರ್ಥ ಮೊರೆದು ಬುಸುಗುಟ್ಟುತಿದೆ,
ಚೆಲ್ಲುತಿದೆ ತುಂಬಿ ದುಷ್ಕೃತಿಯ ಹರವಿ.

ಜಾತಿಜಾತಿಗು ಮತಮತಕ್ಕು ವ್ಯಕ್ತಿಗಳೊಳಗು
ಏತರದೊ ಕಲಹ–ಇದರಿಂದೆ ನೊಂದು
ಪೂತೆ ಭಾರತಮಾತೆ ಭೂತಳಕೆ ಹೊಲೆಯಾಗಿ
ಸೀತು ಹೋಗಿಹಳುರಿದು ಬಾಡಿ ಬೆಂದು.

ಹಿಂದಿನದು ಹಳತಾಗಿ ಕೊಳೆಕೊಳೆತು ನಾರುತಿದೆ ;
ಮುಂದಿನದು ಗಾಳಿಗೋಪುರದ ಮಾತು.
ಇಂದಿನದು ಮುಂಬೆಳಗು ತೋರದಿರುಳಿನ ರೀತಿ,
ಚಂದಿರನ ಹೊಳಹಿರದ ಕಾಳರಾತ್ರಿ !

ಹಳೆತನದ ಕೊಳೆಯೊಳೇ ಸವಿಯ ಕಾಂಬರು ಕೆಲರು,
ಅಳಿಮನದ ಕುರುಡುನಂಬುಗೆಯ ಜನರು ;
ಹಳಿವುದೊರಲ್ವುದೆ ಗೊತ್ತುಗುರಿಯಾಗಿ ಹೊಸತನದ
ಸುಳಿಯೊಳುರುಳ್ವರು ಮರುಳು ಜವ್ವನಿಗರು.

ಹಳೆತರೊಳು ಹೊಸತನವನಳವಡಿಸಿ ಮೃದುಪಾಕ
ಗೊಳಿಸಲಣ್ಮುವ ಬಿನ್ನಣಿಗಳದೆಲ್ಲಿ ?
ಹಳಿಯದೆಯೆ ತುಳಿಯದೆಯೆ ಒಳ್ಪಿತನು ಸವಿಗೊಂಬ
ಬಲುಹುಳ್ಳ ರಸವಿದರ ನೆಲೆ ಅದೆಲ್ಲಿ ?

ಈ ಹುರುಪುಜವ್ವನದ ಸಿರಿವೆರಸು ಬಾಳುವೆಯ
ಸಾಹಸಕೆ ಜೊತೆಗೊಳಿಸದಿರ್ಪುದುಂಟೆ ?
ದೇಹದಾಸೆಯ ತೊರೆದು ಮಾತೃಭೂಮಿಯ ಸೇವೆ
ಗಾಹಾರವಾಗಿ ಕೊಡದಿರ್ಪುದುಂಟೆ ?

# ತೊರೆಗಳೆಲ್ಲ ಬರಲಿ ಬಿಡು !

೧

ತೊರೆಗಳೆಲ್ಲ ಬರಲಿ ಬಿಡು
ಎದೆಯ ಕಡಲಿಗೆ ;
ಜಗದ ಎಲ್ಲ ಬಳಲಿಕೆಗಳು
ಅದರ ಮಡಿಲಿಗೆ
ಬಂದು ಅಲ್ಲಿ ಮಲಗಿ ದಣಿವ ಕಳೆದು ಹೋಗಲಿ !

ರೆಕ್ಕೆಮುರಿದ ಆಶೆಗಳೇ ಇತ್ತ ಬನ್ನಿರಿ ;
ಈ ಎದೆ ಮೆಲ್ಹಾಸಿನಲ್ಲಿ ಬಂದು ಮಲಗಿರಿ.
ಗಾಯವೆಲ್ಲ ಮಾಯ್ದ ಬಳಿಕ
ರೆಕ್ಕೆ ಪುಕ್ಕ ಬಲಿತ ಬಳಿಕ
ಮನ ಬಂದೆಡೆ ಸಾಗಿರಿ ;
ಅಲ್ಲಿತನಕ ಇಲ್ಲೆ ಇರಿ ; ಎಲಾ ಮುದ್ದುಮರಿಗಳೇ !

ನಿನ್ನ ಮನವ ತೆರೆದಿಡೆಲ್ಲ
ಬೆಳಕಿನ ಹಾವಳಿಗೆ ;
ಬಿರುಗಾಳಿಯ, ಬೆಂಗಾಳಿಯ ದಾಳಿಗೆ ;
ಮೆಲ್ಲೆಲರಿನ, ತಂಗಾಳಿಯ ಕೇಳಿಗೆ ;
ಸುಡುವ ಬಿಸಿಲ, ತಂಪೆರೆಯುವ ಬೆಳುದಿಂಗಳ ರುದ್ರಮಧುರ
ನಾಟ್ಯಕೆ !

ಎಲ್ಲ ಎಲ್ಲ ಅನುಭವದ
ಮೂಸೆಯಲ್ಲಿ ಭವಭವದ
ಕಿಲ್ಬಿಷಗಳು ಸುಟ್ಟುರಿವೊಲು ಕೆರೆಳಿಸೆದೆಯ ಕಾವುಗಳ ;
ಬರಲಿ ಅಚ್ಚ ಬಂಗಾರ
ಸಿನ್ನತನದ ಸಿಂಗಾರ
ಅಥವಾ ಬರಿ ಅಂಗಾರ
ಮಿಗಲಿ ನಿನ್ನ ಮಾತನೆಲ್ಲ ಮರೆಯೆ ಭೂತಳ !

# ಸೇವೆ

ಆವ ವಿಧದಲಿ ಕನ್ನಡದ ಮಾತೆ ನಿನ್ನಡಿಯ
ಸೇವೆಗೆನ್ನೀ ತನುವ ಮುಡಿಪಾಗಿ ಕೊಡಲಿ?

ನಿನ್ನ ಮುನ್ನಿನ ಸಿರಿಯ ಸುಖವೆಲ್ಲವನು ತೊಡೆದು
ಬನ್ನಕಾಳಾಗಿಸಿದ ವಿಧಿಯ ಹಿಡಿತಂದು
ನಿನ್ನ ತೊತ್ತಾಗಿ ಬಾಗಿಸಿ, ತಾಯೆ, ನಿನ್ನ ವಿಭ
ವೋನ್ನತಿಯ ಕಂಡು ಕೊನೆಕೊನೆದು ಕುಣಿದಪೆನೆ!

ಕಳೆದ ನಿನ್ನಯ ಬಾಳ ಹಗಲನಿನ್ನೊಮ್ಮೆ ಸೆಳೆ
ಸೆಳೆದು ಭೂತದ ಗರ್ಭದಿಂದ ಹೊರತೆಗೆದು,
ಬಳಸಿರುವ ಕಾರಿರುಳ ನನ್ನೆದೆಯ ಗುಹೆಯೊಳಗೆ
ನೆಲೆಗೊಳಿಸಿ ನಿನ್ನ ಬಾಳ್ವೆಯನು ಬೆಳಗಿಪೆನೆ?

ನಿನ್ನ ಸಂಕಲೆಯ ಕಡಿದೊಗೆಯಲಿಂದ್ರನ ವಜ್ರ
ವನ್ನೆ ನಾ ಭರದೊಳಪಹರಿಸಿ ತಂದಪೆನೆ?
ನಿನ್ನ ಬೆಂದೆದೆಯಿದನು ತಣ್ಪುಗೈಯ್ಯಲು ಸುಧೆಯ
ನಿನ್ನೊಮ್ಮೆ ಕಡಲ ಕಡೆಕಡೆದು ಪಡೆದಪೆನೆ!

ತಾರೆಗಳ ಹಾರ ಮಳೆಬಿಲ್ಲ ಮೇಖಲೆ ಅಕೂ
ಪಾರಗಳ ನವವಸನ ಮಿಂಚುಗೊಂಚಲಿನ
ಚಾರುಭೂಷಣವೆರಸು ಮುಗಿಲ ಭದ್ರಾಸನವ
ನೇರಿಸುತೆ ಕಂಡು ಸೊಗಗೊಂಡು ಕುಣಿದಪೆನೆ?

ಕರಣಗಣವನು ನಿನ್ನ ಚರಣಸೇವೆಗೆ ಮೀಸ
ಲಿರಿಸಿ ವೃತಿವಾಹನವನೇರಿ ಮುನ್ನಡೆದು
ತಿರುಗಿ ಭಾವಾತೀತರಾಜ್ಯದೊಳು, ತಾಯೆ, ನಿನ
ಗರಸಿ ತಂದೀವೆನೇ, ಅಮರ ಸೌಖ್ಯವನು?

ಅರಿಗಳೆಲ್ಲರ ಕೊತ್ತಿ ಜಯಪತಾಕೆಯನೆತ್ತಿ
ತಿರೆಯೊಳಗೆ ನಿನ್ನ ಬೆಳ್ಗಸವನಿಡಿಕಿರಿಸಿ,
ಹರಣವನು ನಿನಗೆ ಮುಡಿಪಾಗಿರಿಸಿದಾ ತೃಪ್ತಿ
ದೊರೆಯೆ ದಣಿದೊರಗುವೆನೆ ನಿನ್ನ ಸೋಗಿಲಲಿ ?

ನಿನ್ನ ಮೊಗದೊಳು ಮಂದಹಾಸ ಮಂದಯಿಸುತಿರೆ
ನಿನ್ನೆದೆಯೊಳಾನಂದ ರಸವು ತುಳುಕುತಿರೆ
ನಿನ್ನ ಸುಯಶೋಗಾನಮೆಣ್ದೆಸೆಯ ತೀವುತಿರೆ
ಕಣ್ಣಮುಚ್ಚುವ ಬಯಕೆ ಕೈಗೂಡಬಹುದೆ ?

ಜನನಿ ! ನಿನಗಾಗಿ ತನ್ನೆಲ್ಲವನು ಬಲಿಗೊಡಲು
ಅನುವಾಗಿರುವನಿದೋ ನಿನ್ನ ನಲ್ಗುವರ ;
ಮನಕೆ ಮೆಚ್ಚೆಂತಾದುದಂತಾಣತಿಯನಿತ್ತು
ಕೊನೆಗೆ ನೋಡೌ ನನ್ನ ಸಾಹಸದ ಪರಿಯ.

# ಕೊರಗು

೧

ಹೃದಯದ ಉದಾತ್ತ ಭಾವ,
ಬಾಳ ಹಿರಿಯ ಹಂಬಲೆಲ್ಲ
ಮಣ್ಣುಗೂಡುತಿರಲು ಕಂಡು
ಕಣ್ಣನೀರ ಮಿಡಿವುದೊಂದೆ
ನಮ್ಮ ಹಣೆಯ ಬರೆಹವೇ? ಅಯ್ಯೋ—ನಮ್ಮ ಬಾಳ್ವೆಯೇ!

೨

ಆಗ ಈಗ ಹೃದಯವೆದ್ದು
ಬೆಂಕಿಯಾಗಿ ಚಿಮ್ಮಿ ನೆಗೆದು
ಬಾಳನೆಲ್ಲ ತೊಳಗುವುದು;
ಕಾಣದೂರ ಬೆಳಗುವುದು.
ಆ ಬೆಂಕಿಯೆ, ಆ ಬೆಳಕೇ
ಬಳಿಕ ಕನಲುಕೆಂಡವಾಗಿ
ಕರಿಕುತಿಹುದು, ಹೊಗೆಯುತಿಹುದು;
ಸುಡುತಲಿರಲು ಚಿತ್ತವು—ಬೂದಿ
ಯಾಯ್ತು ಆಸೆಬಿತ್ತವು!

೩

ಕಾಣದೂರಿನೊಂದು ಕನಸು
ತಿದ್ದಲೆಳಸುತಿರುವ ಮನಸು;
ಮಾಣದೂರ ಹಲವು ಹೊಲಸು
ಕಿತ್ತು ತಿನ್ನುತಿರುವ ಮನಸು;
ತೆಳ್ಳಗಾಗಿ, ಬೆಳ್ಳಗಾಗಿ
ಬಾನನೇರುತಿರುವ ಕನಸು;
ಕೋಳವಾಗಿ, ಕಾಳವಾಗಿ
ನೆಲದೊಳಿಳಿಯುತಿರುವ ನನಸು;

ಇವುಗಳೊಂದು ನಾಟ್ಯರಂಗ
ನಮ್ಮ ನಿಮ್ಮ ಹೃದಯರಂಗ;
ತಾಳವಿರದ ಮೇಳವಿರದ
ಹುಚ್ಚುಹುಚ್ಚು ಕುಣಿತವು—
ನಮ್ಮ ಭವವು, ಬಾಳ್ವೆಯು !

೪

ವೈರಿಯ ಹಿತವು ಬಗೆಗೆ ಅಹಿತ ;
ಹೃದಯದ ಸಿತ ಜಗಕೆ ಅಸಿತ ;
ಸೊಗದ ಹೂಗೆ ದುಗುಡದ ಫಲ,
ಬಂಜರಾಯ್ತು ಬಾಳಹೊಲ ;
ಸಡಿಲುತಲಿದೆ ಬಾಳ್ವ ಛಲ.

೫

ಈ ಮಣ್ಣಿಗೆ ಮುಗಿಲ ಚಪಲ
ಎನಿಸುತಲಿದೆ—ವಿಫಲ, ವಿಫಲ !
ನೆಲದಿ ಹುಟ್ಟಿ, ನೆಲದಿ ಬೆಳೆದು
ಇಲ್ಲೆ ಹೊರಳಿ, ಇಲ್ಲೆ ಉರುಳಿ
ಇಲ್ಲೆ ಕೊನೆಗೆ ಅಳಿವುದೇ
ಕೊಳೆವುದೇ, ಇಳಿವುದೇ
ನಮ್ಮ ಬಾಳಿನರ್ಥವೇ ?—
ಅಯ್ಯೊ, ನಮ್ಮ ಬಾಳ್ವೆಯೇ !

# ಚರಮಗೀತೆ

(ಅಳಿದ ಗೆಳೆಯನನ್ನು ನೆನೆದು)

ಅಳಿದನೇ ಗೆಳೆಯ ನನ್ನೆದೆಯನಳಲಿನ ಕಡಲೊ
ಳಿಳಿಸಿದನೆ? ಬಗೆಯ ನಲ್ಗನಸುದುರುಗಲನಿಂತು
ತುಳಿದನೇ, ಹಳಿದನೇ ಹೃದಯವಂ ಜೀವವಂ ಬೆಂಡಾಗಿಸುತೆ ನಡೆದನೆ?
ಇಳಿವ ಮಂಜಿನ ಭರಕೆ ಬೀಳ್ವ ಸುಮದಂತವನ
ಲಲಿತ ತನುವಿಂತಕಾಲಿಕ ಮೃತ್ಯುವಿನ ಬಾಯ್ಗೆ
ಸಿಲುಕಿತೇ? ಸಿಲುಕಿತೇ ಎನ್ನಂತರಂಗವುತ್ತುಂಗನಿರ್ವೇಗದುರಿಗೆ?

ಈ ವಾರ್ತೆಯಂ ನಂಬಲಾರೆನಕಟಕಟಿನ್ನ
ಜೀವಜೀವಾಳದೊಳ್ ಕೆತ್ತಿದಂತಿರ್ಪುದವ
ನಾ ವಿಮಲರೂಪು; ಕಣ್ಮುಂದೆ ನಿಂತಂತಿರ್ಪುದವನ ಲಲಿತಾಂಗಭಂಗಿ.
ತೀವಿದಂತಿದೆ ಕಿವಿಯೊಳವನ ಸುಮಧುರವಾಣಿ
ಭಾವನೆಯೊಳಚ್ಚಳಿಯದಂತಿರ್ಪುದವನ ಸ
ದ್ಭಾವಮುದ್ರಿತಮೆನಿಪ ಕೂರ್ಮೆ ಹೃತ್ತಂತ್ರಿಯಂ ಮೀಂಟಿದಪುದವನ ನೆನಪು.

ನಡುವಗಲ ನೇಸರಂ ಘೋರಾಂಧಕಾರ ಸೆರೆ
ಹಿಡಿವುದುಂಟೇ? ಬಸಂತನ ಸಿರಿಯ ಸಿಂಗರಂ
ಕೆಡೆವುದುಂಟೇ ಮಾಗಿಯಡಿಗಳೊಳ್? ವಿಸ್ತೃತಂ ತಾನೆ ಮಿಳಿರ್ವೊಂದೆಳಲತೆ
ಕುಡಿಮುರುಟಿದಪುದುಂಟೆ? ಕೋಶಮಂ ತೊರೆದು ಧೀಂ
ಕಿಡುವೊಂದು ತುಂಬಿ ಮೆದೆಗೆಡುವುದುಂಟೇ ಪಂಕ-
ಮೊಡಲೊಳ್? ಅಳಿವಿಂಗೆ ಬಸಮಪ್ಪುದುಂಟೇ ನವ್ಯಯುವ್ವನೋದ್ಭಾಸನಿವನು?

ಮಂಜುಲಮೆನಿಪ ರೂಪು, ರೂಪಿಂಗೆ ನಾಲ್ಮಡಿಗೆ
ಮಂಜುಲತರಂ ಕಣ್ಗೆವರುವ ಸದ್ಗುಣಗಣಂ
ಮಂಜುಲತಮಂ ಮನಂಗೊಂಬ ದಿವ್ಯಸ್ನೇಹಪೀಯೂಷವರ್ಷಿಯಾಗಿ
ಮಂಜುಭಾಷಿತಮೆಸೆಯೆ ನಿಜ ಹೃದ್ವಿಪಂಚಿಯೊಳ್
ಮಂಜುತರ ಗಾನಮಂ ನುಡಿಸಿ ಮೋಹಿಸಿದೆಯ್ಯೆ;
ಮಂಜುನಾಥಾ, ನಿನ್ನ ಮಂಜುಸಾನ್ನಿಧ್ಯಕಮರರ್ ಪುರುಡುಗೊಂಡರಕಟಾ!

ಮಾಸದ ಗುಣಂ, ಕಿಡದ ನಡೆ, ನಡೆಯೊಳಾವಗಂ
ಸೂಸುವಾ ಗಾಂಭೀರ್ಯ, ಗಾಂಭೀರ್ಯವಂ ಕರಂ
ಭೂಷಿಪ ನಯಂ, ನಯದ ಕೂಡೆ ಬೆಂಬಳಿಯ ವಿನಯಂ ಭಯಂ ಬೆರಸದಿರುವ;
ಹಾಸಮಯವಾದ ವದನಂ ವದನದೊಳ್ ಸಲೆ ವಿ-
ಲಾಸಿಸುವ ಮೃದುಮಧುರ ಭಾಷಿತಂ, ಭಾಷಿತದೊ
ಳೋಸರಿಸದಾರ್ಪು; ಮುಂತಪ್ಪ ಸದ್ಗುಣಗಣಂ ಭೂಷಣಂ ನೇಹಿಗಂಗೆ.

ನಿನ್ನ ನುಡಿಯುಂ ನಿನ್ನ ನಡೆಯುನನುರಾಗ ಸಂ
ಪೂರ್ಣಮಾದುತ್ತುಂಗ ಹೃದಯವಂ ನಿನ್ನ ಸೌ
ಜನ್ಯ ಸೌಶೀಲ್ಯವಂ ಕವಡಿನ ಕಿಲುಂಬೇರದತಿ ಸರಳ ವರ್ತನೆಯನು
ಮುನ್ನಿನೊಂದೊಂದು ಚಾರಿತ್ರವಂ ನೆನೆನೆನೆದು
ಬನ್ನದಿಂ ಕೊಕ್ಕುಳಂಗುದಿಯುತಿದೆ ಹೃದಯ; ಪೊರ
ಪೊಣ್ಮುತಿದೆ ಕಣ್ಣೀರು, ತೊಳೆಯುತಿದೆ ಎನ್ನೆದೆಯೊಳಿರ್ಪ ನಿನ್ನಾಕೃತಿಯನು.

ಜರೆಗೆ ಸೆರೆಯಾದ ತಂದೆಯ ಹೃದಯ ಲತೆಯೊಳಿ
ರ್ಪರಳಿದೊಂದೇ ಕಂಪ ಸೂಸುತಿದೆ; ಬಂದು ಮಡ
ಲಿರಿದ ಸಿರಿಗೀತನೊರ್ವನೆ ವಲ್ಲಭಂ, ಸ್ವವಂಶಾಕಾಶದೊಳ್ ತೊಳಗುವ
ಮಿರುಪ ಚಂದ್ರಂ ತಾನೆನಲ್ಕಿರ್ದು ಮೃತ್ಯುವಿನ
ಕರೆಗೆ ಮನ ಸೋಲ್ವುದುಂಟೇ? ಪೇಳ! ಬಂಧುಗಳ
ಸೆರಗಿಲ್ಲದಳಲನಾವಂ ನೋಡಿ ಸೈರಿಪನನಾಥಪಿತನುಬ್ಬೆಗವನು?

ಕೃತಿಯಾದೆ ಗೆಳೆಯ! ಬನ್ನಂ ನಮಗೆ ದೊರೆಕೊಂಡೊ
ಡತಿಶಯಂ. ಭವದ ಬಂಧನಗಳ್ ಸಡಿಲ್ದು ನಿ-
ಷ್ಕೃತನಾದೆಯೈ; ನಿಹಿತನಾದೆಯೈ ವಿಶ್ವಾತ್ಮನಾತ್ಮಾಂತರಾಳದೊಳಗೆ.
ಸತತಮಿಾ ಪ್ರಕೃತಿಮಾತೆಯ ವೈಸಿರಿಯೊಳೆಮ್ಮ
ಮತಿಗೆ ಗೋಚರನಾಗು! ನಿನಗಿದೋ ತರ್ಪಣಂ:
ಜೊತೆಯಾಗಿ ಬಾಳ್ದ ನೆನಪಿಗೆ ಸುರಿವ ಕಂಬನಿಯ ನಿಡುವನಿಯ ಧಾರೆ, ಧಾರೆ!

# ಮನೆ

ಮನೆಯೆಂದೊಡನೆದೆ ಕುಣಿದಾಡುವುದೆಮೆ
ಹನಿಗೂಡುವುದೊಡಲಲುಗುವುದು ;
ತನು ರೋಮಾಂಚಿತವಪ್ಪುದು ; ಕರಣಗ
ಳನು ಮೌನವು ಮೋಹರಿಸುವುದು.

ಮನೆಯೆಂಬೀ ನುಡಿ ಇನಿದದರಿಂದೆನ
ಗಿನಿದೀ ದೂರದ ನಾಡಿನೊಳು
ಮನದೊಳು ಚಿರಮೆನೆ ಬಾಳುವ ಆಳುವ
ಮನೆಯ ಸೊಗದ ಸವಿನೆನಹುಗಳು.

ಕರದೊಳಗಿರುವೊಡವೆಯ ಹಿರಿಬೆಲೆ ನಮ
ಗರಿವಹುದದು ಕಳೆದಾ ಬಳಿಕ;
ಇರುತಿರೆ ಮನೆಯೊಳದರ ಬೆಲೆಯರಿಯದೆ
ಕೊರಗುವುದಿಂದೆದೆ ಬಿರಿವನಕ.

ಮರಗಿಡವೆನಿತನೊ ಸುತ್ತುತೆ ಸಂಜೆಗೆ
ಬರದಿರ್ಪುದೆ ಗೂಡಿಗೆ ಹಕ್ಕಿ ?
ಪರಿಪರಿಯೆಣಿಕೆಗಳಾಗಲು ಕೊನೆಗೈ
ತರದೇ ನಿನ್ನೆಡೆಗೆದೆವಕ್ಕಿ ?

ಮರದೊಳಗಿನ ಮಿಡಿಯಂದದಿ ಹಿರಿಯರ
ಪರಿಪಾಲನೆಗೊಡಲನು ಕೊಟ್ಟು
ಪರಿಪರಿಯಲಿ ಸೊಗಗೊಂಬುದರೊಳೆ ಪ್ಯಾ-
ಮರೆತುದೆ ಮನೆಬಾಳ್ವೆಯ ಗುಟ್ಟು !

ಒಡಲೊಳಗಿನ ಕವಡಿನ ಕುಟಿಲತೆಗಳ
ನಡಗಿಸಿ ಕಿರುನಗೆ ಪರದೆಯೊಳು
ಕಡುಕರುಣಿಗಳೆನೆ ನಟಿಸುವ ಜನಗಳ
ಗಡಣದೊಳೆದೆಯುಳವಳಿದಿಹುದು !

ಕರೆವುವು ಪಡುಗಡಲಿನ ತೆರೆ-ಕರೆಗಳು ;
ಕರೆವುವು ತೆಂಗಿನ ಸಾಲುಗಳು ;
ಕರೆವುವು ಪುಲಿನಸ್ಥಲಗಳು ಹೊಲಗಳು ;
ಕರೆವುವು ಕೆರೆತೊರೆಕಾಲುಗಳು !

ಕರೆವುದು, ಕರೆವುದು ಮನೆಮುಂಗಡೆ ಬಾ
ಗಿರುವಾ ಹಿರಿಮಾವಿನ ನೆಳಲು ;
ಕರೆವುದು, ಕರೆವುದು ಮನೆನೆರೆದೇಗುಲ
ದುರುಶಾಂತಿಯ ಸಿಂಗಾರಗಳು !

ಮನೆಯಿದಿರಿನ ಹನೆಮರದೊಳಗಿನ ಗೂ
ಡಿನೊಳಿಹ ವಿವಿಧ ವಿಹಂಗಗಳು
ದಿನದಿನವೆನ್ನನು ಕರೆಯುವೆ, ಮೊರೆಯುವೆ
ತನಿನೇಹದ ಸವಿನೆನಹಿನೊಳು ?

ಹಸುರೆಲೆವನೆಯೊಳು ಕುಳಿತಾಲೋಚಿಪ
ರಿಸಿಯಂತೆವೊಲೆಡಬಲಗಳೊಳು
ಮುಸುಕಿದ ತೋಹಿನ ನಡುವೆಮ್ಮಯ ಮನೆ
ಎಸೆವುದು ಶಾಂತಿಯ ನೆಲೆಯೆನಲು.

ಬಳಿಯೊಳೆ ಕಳವೆಯ ತೆನೆ ತಿತ್ತಿರಿದ—
ಗ್ಗಳಿಸುವ ಗದ್ದೆಗಳೆನಿತೆನಿತೊ ;
ತಿಳಿವೆಳದಿಂಗಳ ಸವಿಯನು ಹೀರುತೆ
ಬಳೆವಾ ಕಬ್ಬಿನ ಹೊಲವೆನಿತೋ !

ನಿನ್ನನು ನೋಡುವ ಹಂಬಲಿನಿಂದೆದೆ
ಬನ್ನವನೆಲ್ಲವನುಣುತಿಹುದು.
ನಿನ್ನಯ ತಳ್ಕೆಗೆ ಮರಳ್ವಾಸೆಯ ಬಾ
ವನ್ನದಣ್ಪೆದೆಯ ತಣಿಸುವುದು !

# ಎದೆಯು ಮರಳಿ ತೊಳಲುತಿದೆ

ಎದೆಯು ಮರಳಿ ತೊಳಲುತಿದೆ,
ದೊರೆಯದುದನೆ ಹುಡುಕುತಿದೆ;
ಅತ್ತ ಇತ್ತ ದಿಕ್ಕುಗೆಟ್ಟು
ಬಳ್ಳಿಬಾಳು ಚಾಚುತಿದೆ
ತನ್ನ ಕುಡಿಯನು.

ಸಿಗಲಾರದ ಆಸರಕೆ
ಕಾದ ಕಾವ ಬೇಸರಕೆ
ಮಿಡುಕಿ ದುಡುಕಲೆಳಸುತಿದೆ
ತನ್ನ ಗಡಿಯನು.

ಅದಕು ಇದಕು ಅಂಗಲಾಚಿ
ತನ್ನೊಲವಿಗೆ ತಾನೆ ನಾಚಿ
ದಡವ ಮುಟ್ಟಿ ಮುಟ್ಟದೊಲು
ಹಿಂದೆಗೆಯುವ ವೀಚಿ ವೀಚಿ
ಮುರುಟುತಲಿವೆ ಮನದಲಿ!

ನೀರದಗಳ ದೂರತೀರ
ಕರೆಯುತಲಿದೆ ಎದೆಯ ನೀರ,
ಮೀರುತಲಿದೆ ಹೃದಯ ಭಾರ,
ತಾಳಲೆಂತು ನಾ?

ಯಾವ ಬಲವು ಯಾವ ಒಲವು
ಕಾಯಬೇಕೊ ಅದರ ಹೊಳವು
ಕಾಣದೆ ದಳ್ಳಿಸಲು ಮನವು
ಬಾಳಲೆಂತು ನಾ?

# ಎಲೆ ಕವಿ!

ಎಲೆ ಕವಿ! ನಿನ್ನನು ನೀ ಮರೆ;
ಶರಧಿಯೊಂದೆ ಗುರಿಯಾದ ಬೆಟ್ಟದೊರೆ
ಕೆಳಗೆ ಕೆಳಗೆ ಹರಿವಂತೆ ಆಳಕೆ,
ಗಾರುವಡೆದ ನೆಲದೊಡಲ ಶಮನಕೆ,
ಹರಿ ನೀ ಸಮತಳಕೆ,
ಕಡಲಿನ ಸಮತಳಕೆ!

ಜಗದ ಜನವು ತನ್ನಳಲಿನ ಹೊರೆ ಹೊರೆ
ತಾಳಲಾರದೆಯೆ ಕುಸಿದು ಬೀಳುತಿರೆ
ನೀನು ನಿನ್ನ ಎದೆಬಾವಿಗೆ ನೋವಿಗೆ
ಕೊರಗಿ ಸೊರಗಿ ನಿನ್ನೊಹೆಯ ದೀವಿಗೆ
ಹಿಡಿದು ನಡೆವೆನೆಂದೆನುವೆಯ, ಸಗ್ಗಕೆ?
ಕನಸು ಸವೆದ ಮಳೆಬಿಲ್ಲಿನ ಅಗ್ಗಕೆ?
ಹರಿ ನೀ ಹೊರಜಗಕೆ;
ಬಯಲಿನ ಸಮತಳಕೆ.

ಹೊಸ ಹೊಸ ಆಸೆಯ ಹೂಗಳು ಸೆಳೆವುವು ದಾರಿಯ ಕೆಲಬಲಕೆ,
ಹೊಸಸಂತಸಗಳ ಹುಲ್ಲಿನ ಹಾಸಿಗೆ ಕರೆವುದು ವಿಲಸನಕೆ,
ಭಾವೋದ್ರೇಕವು ಹಕ್ಕಿಗೊರಲಿನಲಿ ಕರೆವುದು ಪರವಶಕೆ;
ಆದರು ನೀನಿದ ಮರೆಯದಿರೆಲೆ ಮಗುವೆ:
ನಗುವೆಂದರೆ ಅದು ಅಳುವಿನ ಸೆಲೆಯು,
ಸೊಗವು ದುಗುಡಕಿಕ್ಕಿದ ಚೆಲುಬಲೆಯು;
ಒಲವು ಎದೆಯ ಸುಡಲಿಕ್ಕಿದ ಗಂಧದ ಚಿತೆಯು;
ಸ್ಥಿರವಾಗಲಿ, ಹಾ, ಮತಿಯು!
ಎಲ್ಲ ಜನದ ಎದೆತಣಿಸುವ ಪಣವೇ ಜೀವನ ನಿಜಗತಿಯು!

ಎಲೆ ಕವಿ! ನಿನ್ನಳಿಯಾಸೆಯ ತೊರೆ, ತೊರೆ!
ಶಮನವೊಂದೆ ಗುರಿಯಾದ ಬೆಟ್ಟದೊರೆ
ಕೆಳಗೆ ಕೆಳಗೆ ಹರಿವೊಲು ಮೈದಾನಕೆ
ಗಾರುಗೊಂಡ ನೆಲದೊಡಲಿನ ಶಮನಕೆ,
ಹರಿ ನೀ ಸಮತಳಕೆ,
ಕಡಲಿನ ಸಮತಳಕೆ!

# ಯುಗಾದಿ

ಯುಗಯುಗಾದಿಯ ತೆರೆಗಳೇಳುತಿವೆ, ಬೀಳುತಿವೆ
ಹೊಸಹೊಸವು ಪ್ರತಿವರುಷವು;
ಒಳಗೆ ಅದೊ ಕಾಣುತಿದೆ ಚೆಲುವಿರವ ನಲವಿರದ
ಕೊಳೆಯ ಬೆಳೆ;—ರಂಗಮಂದಿರವು!

ನರವ್ಯೃಗಾಲಯದ ಗೊಂದಲವಲ್ಲಿ ಕೇಳುತಿದೆ,
ರುದ್ರ ಬೀಭತ್ಸ ಘನ ಘೋರನಾಟಕವು
ನಡೆಯುತಿದೆ ಮರಮರಳಿ; ಅದೆ ಅದೇ ಹಳೆಯ ಕತೆ:
ಬದುಕಲರಿಯದ ಹುಚ್ಚು ಹುಡುಗಾಟವು!

ಇದು ವಿಷವ್ಯೂಹ; ಇಲ್ಲಾವ ಕಪಟ ಅದೇಕೆ
ತಂದು ಕೂಡಿದನೊ ನರಕುಲವ;
ತೆವಳುವೆವು, ತೊಳಲುವೆವು, ನಡೆಯುವೆವು, ತಡೆಯುವೆವು;
ಬಯಲ ಸೇರುವ ಬಯಕೆ ಮಾತ್ರ ವಿಫಲ!

ಬಾಳುದ್ದವೂ ಅಲೆದು ನೂರುಯೋಜನ ತೊಳಲಿ
ಕುಸಿಯೆ ಕಾಲ್ಗಳು ಅಳಿಯೆ ಬಲವು,
ತನ್ನ ನೆಲೆಯನು ಹುಡುಕಿ ಹೊರಟ ಬಡಜೀವಕಿದೆ
ತೃಪ್ತಿ: ಹೊರಟಲ್ಲಿಗೇ ಬಂದ ಗೆಲವು!

ಈ ಯುಗಾದಿಯು ಕೂಡ ಈ ಮಾತ ಸಾರುತಿದೆ:
ನರನ ಬಾಳಿನ ಗೋಳಿಗಿಲ್ಲ ಅಂತ;
ನರನೆದೆಯ ಕಲ್ಪನೆಯ ಕುಸುಮಸಂಕುಲವೆಲ್ಲ
ಬಂಜೆಹೂವುಗಳಯ್ಯೊ;—ಇದೆ ದುರಂತ!

ಜನಮನದೊಳಂಧಕಾಸುರ ರಾಜ್ಯಭಾರ; ನರ
ನೆದೆಯೊಳು ಹಿರಣ್ಯಾಕ್ಷನರಸುತನವು
ನಡೆಯುತಿದೆ ಇಂದಿಗೂ; ಅವತಾರ ಬರಿಲೀಲೆ!
ಕೊಂದರೂ ಸಾಯದೀ ಅಸುರಕುಲವು!

ಭಾವನೆಯು ಗಾಳಿಗೋಪುರ ವಿಹಾರವು ; ಬುದ್ಧಿ
ನೀರಡಿಸಿದವಗುಪ್ಪುನೀರ ತಣಿವು ;
ದಿವ್ಯಜೀವನದಾಶೆ ಅದು ನಿರಾಶೆಗೆ ನಾವು
ಕೊಟ್ಟು ಬದುಕಿದ ಬೇರೆಯೊಂದು ಹೆಸರು !

ಈ ಯುಗಾದಿಯ ಮಾತು ಕೇಳುತಿದೆ ಮರಮರಳಿ
ಮೊದಲಾಗುತಿದೆ ಯುಗವು, ನರನ ಜಗವು ;
ವರುಷವರುಷವು ನಮ್ಮ ಪಯಣ ಮೊದಲಾಗುತಿದೆ ;
ಇದಕು ಮಿಗಿಲಿಲ್ಲ, ಹಾ ! ನರಗೆ ಸೊಗವು !

# ಇದು ಮೊದಲು

ಹಸಿದಿಹುದು ಹೊಟ್ಟೆ ; ಕೊಡು ಅನ್ನವನು. ನನ್ನ ತನು
ಕೋಡುತಿದೆ ಚಳಿಗೆ ; ಕೊಡು ಬಟ್ಟೆಗಳನು.
ಗಾಳಿ ಬೆಳಕಿನ ಗೋರಿಯಲ್ಲಿ ಹೂತಿರುವೆನಿದೊ ;
ಕೊಡು ನನಗೆ ಸುವಿಶಾಲ ವಸತಿಗಳನು.
ಇದು ಮೊದಲು ಆಮೇಲೆ ಉಳಿದುದೆಲ್ಲ,
ಅದುವರೆಗೆ ಉಳಿದೆಲ್ಲ ಮಾತು ಹೊಲ್ಲ !

ನನ್ನ ಬೆವರನು ಹೀರಿ ಹೀರಿ ಬೆಳೆದಿದೆ ಜಗದ
ಸಿರಿಯು ಸಸಿ ; ಅದರ ಫಲವೆಲ್ಲ ನಿನಗೆ !
ನಗುವ ತೋಟದ ಹೊರಗೆ ಕೊಳೆ ಚರಂಡಿಯ ಮರೆಗೆ
ನಾರುವೆನು ನಾನು—ಕ್ರಿಮಿ ! ನಿನ್ನ ಜಗಕೆ.
ದಯೆಯ ಮಂಜನು ಸುರಿದು ನನ್ನ ಮನಕೆ,
ನೀನೆ ತಲೆದೂಗುತಿಹೆ ನಿನ್ನ ಗುಣಕೆ !

ಧರ್ಮಶಾಸ್ತ್ರದ, ಕಲೆಯ, ನೀತಿಧರ್ಮದ ಬಲೆಯ
ಹೆಣೆದು ಕರೆಯುವೆ ನನ್ನ ನಿನ್ನ ಬಳಿಗೆ ;
ನಿನ್ನ ಮಾತಿಗೆ ಮರುಳು ನೊಣ ನಾನು, ಈವರೆಗೆ ;
ಬರುವ ಕಾಲವೆ ಬೇರೆ ನೋಡು ಹೊರಗೆ :
ಜೇಡನನ್ನೂ ನೊಣೆವ ಅತಿ ಪ್ರಚಂಡ,
ಕಾಣದೇ ಅಲ್ಲಿ ಆ ತಂಡ, ತಂಡ ?

ಒಡೆಯುತಿರೆ ಹಣತೆ ಹೊಸಬತ್ತಿ ಹೊಸೆಯುವೆ ; ಬತ್ತಿ
ಹೋಗುತಿರೆ ಸೆಲೆ ಕಣ್ಣನೀರ ಕರೆವೆ !
ಉರಿವೊಲೆಯ ಮೇಲೆ ಹೂಮಾಲೆ ತೂಗುವೆ ; ಕಾಲು
ಕುಸಿವವಗೆ ಶಿಖರವನು ಹಾಡುತಿರುವೆ !
ನನ್ನ ಮನದೊಳದೇನ ಕಾಂಬೆ ನೀನು ?
ಹಸಿದ ಹುಲಿ ! ಹೂಂಕಾರ ಕೇಳದೇನು ?

ಹೊಟ್ಟೆಯಲಿ ಹುಟ್ಟಿದೀ ಬೆಂಕಿ ವಿಲಯಾಗ್ನಿಸವು
ಏರುತಿದೆ ಎದೆಗೆ, ಮನುಜತೆಯು ಚಿತೆಗೆ!
ಕಟ್ಟುಕಟ್ಟಳೆಯೆಲ್ಲ ಇದಕೆ ಕಟ್ಟಿಗೆಯಾಗಿ
ಸುಟ್ಟೀತು ಮನುಕುಲವೆ ಇದರ ಹತಿಗೆ.
ನಿನ್ನ ನಂದನ ಬೂದಿಯಾಗದಂತೆ
ನನ್ನದನು ಕೊಡು ನಾನು ತಣಿಯುವಂತೆ!

ನ್ಯಾಯ ಅನ್ಯಾಯ ಸತ್ಯಾಸತ್ಯಗಳ ಅರಿವು
ಸುಟ್ಟು ಹೋಗಿದೆ, ನೋಡು, ಹಸಿವೆಯಲ್ಲಿ!
ನಾನು ಪಶು, ಶುದ್ಧಪಶು! ಹೊಟ್ಟೆ ತುಂಬಲಿ; ಬಳಿಕ
ಬಂದೇನು ನಾನೂನು ನಿನ್ನ ಕೂಡ
ನಿನ್ನ ಕನಸಿನ ನೂಲು ದಾರಿಯಲ್ಲಿ;
ಏರೇನು ನಾ ಮುಗಿಲಿನೇಣಿಯಲ್ಲಿ!

ಸುತ್ತುಮುತ್ತಲು ನನ್ನ ಬಳಸಿಹುವು ದೀನತೆಯ
ಹೀನತೆಯ ಗೋಡೆಗಳು ಬಾನೆತ್ತರ;
ಆದರಾಚೆ ಚೆಲುವೊಲವು ರಸವು ಸಂಸ್ಕೃತಿ ನಲವು
ನಲಿವುವೆಂದರೆ, ನೋಡು, ಇದೆ ಉತ್ತರ:-
ಒಡೆದು ಬೀಳಲಿ ಮೊದಲು ಕೋಟೆಯೆಲ್ಲ;
ಇದು ಮೊದಲು ಆಮೇಲೆ ಉಳಿದುದೆಲ್ಲ!

ಅನ್ನವನು ಕೊಡು ಮೊದಲು; ಬಟ್ಟೆಯನು ಕೊಡು ಉಡಲು;
ಕಟ್ಟಿಕೊಡು ಮನೆಗಳನು; ಬಳಿಕ ನೀನು
ಕವಿಯಾಗಿ ಬಾ, ನೀತಿವಿದನಾಗಿ ಬಾ, ಶಾಸ್ತ್ರಿ
ಯಾಗಿ ಧಾರ್ಮಿಕನಾಗಿ ಮನುಜತೆಯನು
ಕಲಿಸು ಬಾ; ಇವನದನು ಕಲಿಯ ಬಲ್ಲ!
ಇದು ಮೊದಲು ಆ ಮೇಲೆ ಉಳಿದುದೆಲ್ಲ!

# ಮಹಾಪೂರ

ಅಮೃತವಾಹಿನಿಯೊಂದು ಹರಿಯುತಿದೆ ಮಾನವನ
ಎದೆಯಿಂದಲೆದೆಗೆ ಸತತ ;
ಗ್ರೀಷ್ಮಗಳು ನೂರಾರು ಉರಿಸಿದರು ಆರದಿದು ;
ಸುತ್ತುಮುತ್ತಲು ಮರಳು, ಮೇಲೆ ಪಾಚಿ
ಮುತ್ತಿಕೊಂಡರು ಲುಪ್ತವಾಗದೀ ಅಮೃತಧುನಿ
ಕಿರಿದಾಗಿ, ಬರಿದಾಗಿ, ನೀರಗೆರೆಯಾಗಿ
ತಳದೊಳೆಲ್ಲೋ ತಳುವಿ ಗುಳುಗುಳಿಸುತಿದೆ ಸೆಲೆಯು,
ಏನನೋ ಕಾಯುತಿದೆ ಗುಪ್ತವಾಗಿ!

ಇಂದಲ್ಲ ನಾಳೆ ಹೊಸಬಾನು ಬಗೆತೆರೆದೀತು
ಕರಗೀತು ಮುಗಿಲ ಬಳಗ ;
ಬಂದೀತು ಸೊದೆಯ ಮಳೆ, ತುಂಬೀತು ಎದೆಯ ಹೊಳೆ
ತೊಳೆದೀತು ಒಳಗು–ಹೊರಗ.

ಈ ಸೆಲೆಗೆ ಆ ಮಳೆಯು ಎದೆಗೆ ಎದೆಎದೆ ಹೊಳೆಯು
ಸೇರದಿರೆ ಇಲ್ಲ ನಿಸ್ತಾರ ;
ಬಂದೆ ಬರಬೇಕಯ್ಯೊ, ಬಂದೆ ತೀರಲುಬೇಕು
ಈ ಬಾಳಿಗಾ ಮಹಾಪೂರ!

# ಧೂಮಲೀಲೆ

ಸಿಗರೇಟಿನ ಹೊಗೆ
ವರ್ತುಳ, ವರ್ತುಳ
ಧೂಪಧೂಮ ಮಾಲೆ,
ವಿವಿಧರೂಪ, ವಿಹ್ವಲವಿಲಾಪಗಳು
ವಿಕೃತ ಚಿತ್ರಗಳು
ಗಾಳಿಯಲೆಯ ಮೇಲೆ.

ಗಾಳಿಗು ನಸುಹಗುರ ಹೊಗೆ :
ಅಂತೆ ಅನಾಯಾಸ ಏರುತಿದೆ ಹೊಗೆಯು ಹೀಗೆ, ಹೀಗೆ :
ಸುರುಳಿ ಸುರುಳಿ ಹೊರಹೊರಳಿಯುರುಳಿ ಎಳೆಎಳೆಗಳಾಗಿ ಬಿಡಿಬಿಡಿಸಿ ಬೆಳ್ಳಿಗೆರೆ
ಎರೆದು ಕೊರೆದ ಹಾಗೆ,
ಕೊರೆದು ಬಿಟ್ಟ ಹಾಗೆ !

ಕರುಣೆಗಾಳಿ ನಸುಮೌನ ತಾಳಿ ತಳುವಿದರೆ ಇದರ ಹೊನಲು
ಕಣ್ಣೆನಳತೆ ಕುಣಿದಾಡಿ ಸೇರುವುದು ಕಾಣದೂರ ನೆಳಲು ;
ಕೆರಳಿ ಗಾಳಿ ಹೊಯ್ದಾಡಿತೆನ್ನು, ಈ ಹೊಗೆಯು ದಿಕ್ಕುಪಾಲು,
ರೂಪವಳಿದು ನೆಲೆಯುಳಿದು ಹರಿಹರಿದು ಬಿಡುವ ನೂಲು, ನೂಲು !

ತೇಲೆ, ತೇಲೆ, ತೇಲೆ
ಹೊಗೆಯಿದು
ಗಾಳಿಯಲೆಯ ಮೇಲೆ
ಬಿಸಿಲ ಝುಳಕೆ ಕಡಲಾವಿಯಾಗಿ ಮೇ
ಲೆದ್ದು ಹೋದ ಹಾಗೆ,
ಸುಪ್ತ ಚಿತ್ತದಲಿ ಸ್ವಪ್ನಚಿತ್ರ ನಿ-
ಶ್ಶಬ್ದ ಎದ್ದ ಹಾಗೆ;
ಜೊನ್ನ ಕುಣಿತವಿದ ಕಂಡು ಕಂಡು ಜನ
ಮನವು ಕಣ್ಣು ಸೋಲೆ
ಸಿಗರೇಟಿನೆದೆಯ ಧಗಧಗಿಸುವುರಿಯು ಕುಡಿ
ವವನ ನಿತ್ಯಲೀಲೆ !

ನಾನು ನೀನು ಸಿಗರೇಟು–ಅಹಹ!–ಅದೆ ಬಣ್ಣ ವಣ್ಣ ತಿಣ್ಣ!
ನಮ್ಮ ಬಾಳು ಹೊಗೆ, ಕಾಣದೊಂದು ನಗೆ ಹರಹುತಿರುವ ಬಣ್ಣ!
ಯಾರೊ ಏನೊ ಕುಡಿಕುಡಿದು ಹೊಗೆಯನುಫ್ ಎಂದು ಉಗುಳುತಿಹನು;
ಹೊತ್ತಿಯುರಿವ ಸಿಗರೇಟು ಬಲ್ಲುದೇನವನ ಸಂತಸವನು?

ಸಿಗರೇಟು ತೋರುತಿದೆ; ಹೊಗೆಯು ಏರುತಿದೆ;
ಕುಡಿವ ಸೊಗಸುಗಾರ
ಯಾವನವನು? ಕಾಣಿಸದು ಕುಡಿವ ಬಾಯ್ ಹಿಡಿದ ಬೆರಳ ಯುಗಳ.
ಸಿಗರೇಟು ತೀರುತಿದೆ, ಹೊಗೆಯು ಏರುತಿದೆ,
ಹೊಗೆಯೆ ಮೊದಲು ಕೊನೆಯು!
ಈ ಬಾಳ ನನೆಯು, ಕೊನೆಯು!

# ಸಮಾಜ ಭೈರವ

ನನ್ನ ಮನವ ನನಗೆ ಕೊಡು
ಓ ಸಮಾಜ ಭೈರವ ;
ನನ್ನ ನಗೆಯ ನನ್ನ ಬಗೆಯ
ನನ್ನ ಜಗವ ನನಗೆ ಬಿಡು,
ನನ್ನ ಮನವ ನನಗೆ ಕೊಡು.

ತೊಡಿಸಬರಲು ಬೇಡ ನಿನ್ನ ಹೊನ್ನ ಸಂಕೋಲೆಯ,
ಬಳಿಕ ಮುಗುಳ ಮಾಲೆಯ ;
ಉಡಿಸ ಬರಲು ಬೇಡ ನನ್ನ ಮನಕೆ ನಿನ್ನ ಚೇಲವ,
ನಿನ್ನ ದಯೆಯ ಸಾಲವ ;
ಬಿಟ್ಟುಬಿಡೋ, ಎಲೆಲೆ, ನನ್ನ ಮನವ ತನ್ನ ಪಾಡಿಗೆ,
ತನ್ನ ಹಲವು ಹಾಡಿಗೆ.

ನೀನು ಸಮೆದ ಈ ಪಂಜರ ಅತಿ ಸುಂದರವಹ ! ಮೆಚ್ಚಿಗೆ
ನನ್ನದದಕೆ, ತಕ್ಕುದಯ್ಯ ಅದೇ ನಿನ್ನ ಹುಚ್ಚಿಗೆ.
ಬಿಟ್ಟುಬಿಡು ನನ್ನ ಮಾತ್ರ ನನ್ನ ಎದೆಯ ನೆಚ್ಚಿಗೆ.
ನನ್ನನಲ್ಲಿ ಸೆರೆದೂಡಲು ಮಾಡಬೇಡ ಸಂಚನು,
ಹಾಕಬೇಡ ಹೊಂಚನು.

ನನ್ನ ಮನವು ಹಾಯಬೇಕು ದಿಗ್ದಿಗಂತದಾಚೆಗೂ,
ಏರಬೇಕು ಮುಗಿಲಿನಾಚೆ ತಾರೆಯಾಚೆಯಾಚೆಗೂ,
ಇಳಿಯಬೇಕು ಪಾತಾಳದ ಗಹನ ತಿಮಿರದಾಳಕು,
ಇನ್ನು ಇನ್ನು ಅಗಲಕೂ, ಮೇಲಕೂ, ಆಳಕೂ !

ನುಚ್ಚುನೂರು ನಾನು ನಿನ್ನ ಒಂದೆ ಪದಾಘಾತಕೆ,
ನಿನ್ನ ನಿಶ್ವಾಸದೊಂದು ವೀಚಿಘಾತಮಾತ್ರಕೆ ;
ತಳುವು ಕೊಂಚ ; ನೀರಗುಳ್ಳೆ ಕುಣಿದು ಕುಣಿದು ಒಡೆಯಲಿ;
ಒಡೆವ ಮೊದಲು ಅದರ ಬಣ್ಣದಾಟವನಿತು ತೀರಲಿ.

ತಳುವು ಕೊಂಚ, ಓ ಭೈರವ, ಏತಕಿಸಿತು ಅವಸರ?
ಬಂದ ಯಾತ್ರಿ ನಿಲ್ಲಲಾರ—-ಅವನೂ ಗಮನಕಾತರ!

ಅಣುವಿನಲ್ಲು ಆ ಮಹತ್ತು ಬಿತ್ತದಂತೆ ಮಲಗಿದೆ;
ಅದುಮ ಬೇಡ ಅದನು; ಗಾಳಿ ಬೆಳಕು ಮಳೆಗೆ, ಬಿಸಿಲಿಗೆ
ತೆರವಾಗಲಿ ಅದು ಯಥೇಚ್ಛ; ಮೊಳೆವ ಕಾಲ ಬಂದರೆ
ಮೊಳೆಯಲೇಳು ಅದು ಅಬಾಧ, ನಿನಗೇನಿದೆ ತೊಂದರೆ?
ಆ ಹೆಸರೂ ಸೇರದೇನು ನಿನ್ನ ಯಶೋಮಾಲೆಗೆ?

ಹುಲ್ಲಿಗಿಲ್ಲ, ಕಳ್ಳಿಗಿಲ್ಲ,
ಹೂವಿಗೇಕೆ ಸೌಸವ?
ಎಂದು ಹಿಸುಕಬೇಡವದನು.
ಅದನು ಅದರ ಲಸನಕೆ,
ತನ್ನತನದ ತನನಕೆ
ಬಿಟ್ಟುಬಿಡು, ಬಿಟ್ಟುಬಿಡು,
ಓ, ಸಮಾಜ ಭೈರವ!

# ನಂದಾದೀಪ

ಆರದಿರು, ಆರದಿರು, ಓ ನನ್ನ ಬೆಳಕೆ!
ಒಳಗಿರುವ ಬೆಳಕೆ, ಬೆಳಕೇ!
ತಾರದಿರು ಕಾರಿರುಳನೆದೆಯ ಮಂದಿರಕೆ;
ಆಗು, ನಂದಾದೀಪವಾಗಿ ಬೆಳಗು,
ನನ್ನ ತನದೆಳಮೊಳಕೆ, ಬೆಳಕೇ
ಓ ನನ್ನ ಬೆಳಕೇ!

ಒಮ್ಮೊಮ್ಮೆ ಭುಗಿಲೆದ್ದು ನೆಗೆದೆದ್ದು ಬಂದು
ಉನ್ನತದ ಸಿರಿನಾಡ ಸೊಬಗಿದೆಂದು
ತೆರೆದು ತೋರಿದೆ ಎದೆಗೆ; ಬಾಳೊಳೆಲ್ಲ
ಮೇಲುನಾಡಿನ ಕನಸ ಬೆಳೆದೆಯಲ್ಲ!
ಮಿಂಚುತನದೀ ಸಂಚು ಸಾಕು, ಸಾಕು!
ಆಗು, ನಂದಾದೀಪವಾಗಿ ಬೆಳಗು.

ನಂಬಿ ಕುಳಿತೆನು ನಿನ್ನ ದಿನವು, ದಿನವು,
ಹಂಬಲಿಸಿ ಸಣ್ಣಾಗುತಿರಲು ಮನವು;
ಕಿಡಿಯಾಗಿ ಬಗೆತಳದೊಳೇಕೆ ಕುಳಿತೆ?
ಇಡಿಯಾಗಿ ದಳ್ಳಿಸಲದೇಕೆ ಮರೆತೆ?

ಹೊನ್ನ ಬಲೆಯನು ಬೀಸಿ ಹೂವು ಹಾಸಿಗೆ ಹಾಸಿ
ಸುಗ್ಗಿಸುಗ್ಗಿಯ ಚೆಲುವುನಲವುಗಳನಣಿಗೊಳಿಸಿ
ವಿಷಯ ಸುಖದಾಮಿಷವನೆತ್ತೆತ್ತಲೂ ಚೆಲ್ಲಿ
ತುತ್ತುಗೊಳಲೆಂದು ಸೆಳೆಯುವುದಿಂದು ಕತ್ತಲು,
ತತ್ತರಿಸಿ ಬಾಳು ಕೈ ಚಾಚುತಿದೆ ಸುತ್ತಲೂ;
ಎತ್ತು ಎತ್ತೆಲೆ ಎತ್ತು ಬೆಳಕಿನ ಪತಾಕೆ,
ಒಳಗಿರುವ ಬೆಳಕೆ, ಬೆಳಕೇ!

ಮನವೆಲ್ಲ ಬೆಳಕಾಗಿ ಹೊಳೆವುದೆಂತು?–ಭಾವ–
ದೊಳಗೆಲ್ಲ ಚಿಜ್ಜ್ಯೋತಿ ನಲಿವುದೆಂದು?

ಸಿಂಧುವಾಗಲಿ ನಿನ್ನ ದೀಪಬಿಂದು ;
ನೀನಲ್ಲದೆನಗಿಲ್ಲ ಅನ್ಯಬಂಧು !
ನೇಹವಿದೆ, ಮೋಹವಿದೆ ಕತ್ತಲಿನ ಬಲಕೆ ;
ನೀ ಸ್ವಯಂಪ್ರಭ ; ಬಾರ ನನ್ನ ಬೆಂಬಲಕೆ,
ಓ ಚೆನ್ನ ಬೆಳಕೆ, ಬೆಳಕೇ !

ಎಲ್ಲ ಬೆಳಕಿನ ಮೊಟ್ಟೆ ನೀನು ; ಮರೆವಿನ ಕಟ್ಟೆ
ಯೊಡೆದು ಬಾ, ನಿಡಿದು ಬಾ, ಹರಡಿ ಬಾ, ಹರಿದು ಬಾ,
ಕೊಚ್ಚಿಹೋಗಲಿ ಎಲ್ಲ ಕತ್ತಲಿನ ಕೊತ್ತಳ ;
ಉಚ್ಚಿಹೋಗಲಿ ಜೀವ ತೊಟ್ಟಿಲ್ಲ ಪತ್ತಲ ;
ಈ ಬೆಳಕು ಆ ಹಿರಿಯ ಬೆಳಕು–ಕಡಲಿನಲಿ
ಬೆರೆಯಲಿ, ಕರಗಲಿ, ಅರಗಲೊಂದಾಗಲಿ ;
ಕಾಯುವೆನು ಆ ದಿನವ ; ಅಂದು ತನಕ
ಬಿರುಗಾಳಿ ಬೀಸಲಿ, ಗುಡುಗೆದ್ದು ಮೊಳಗಲಿ,
ಮಳೆಬಿದ್ದು ಹೊಯ್ಯಲಿ, ಬಾಳೆಲ್ಲ ತೊಯ್ಯಲಿ !
ಆದರೂ ಆರದಿರು ಓ ನನ್ನ ಬೆಳಕೇ !
ಆಗು ನಂದಾದೀಪವಾಗಿ ಬೆಳಗು,
ಒಳಗಿರುವ ಬೆಳಕೆ, ಬೆಳಕೇ !

# ಏಳುವುದೆಂದೀ ಜನಪದ?

ಏಳುವುದೆಂದೀ ಜನಪದ?
ಕ್ರಾಂತಿರೌದ್ರಕೆ ಬಹುದೆಂದಿಗೆ ಹದ?
ಏಳುವುದೆಂದೀ ಜನಪದ?

ಶತಶತಮಾನದ ನಿದ್ರಾನೀರದ
ತೊಲಗಿ ತನ್ನ ತನದರಿವಿಂದರಳಿದ
ಭಾವಭಾವಗಳ ಕೃತಿಸಂಸ್ಕೃತಿಗಳ
ಸುಂದರ ಸೂಜ್ವಲ ತಾರಾಸಂಪದ
ಪಡೆಯುವುದೆಂದೀ ಹರಿಪದ?
ಓ, ಏಳುವುದೆಂದೀ ಜನಪದ?

ಹೆಗ್ಗುರಿಗಳ ಕಡಲೆಲ್ಲೋ ಕಾದಿದೆ,
ಹರಿವುದನೇ ನದಿಯಕಟಾ ಮರೆತಿದೆ;
ಸಮತೆಯ ದಿವವ್ಲೋ ಬಾಗಿಲ ತೆರೆದಿದೆ,
ಹಕ್ಕಿ ತನ್ನ ರೆಕ್ಕೆಯನೇ ಮರೆತಿದೆ;
ಕಳೆಯದೆ ನಮ್ಮಿ ದುಷ್ಪದ?
ಏಳುವುದೆಂದೀ ಜನಪದ?

ಅನ್ಯಾಯದ ಭೂತಾವಳಿ ನಲಿದುವು,
ಜನದ ಎದೆಯನೇ ಅರೆದುವು ಕೊರೆದುವು;
ಧನದಾಸರ ತಾಂಡವವೇ ನಡೆಯಿತು,
ಉದರದ ವೇದಿಕೆ ಒಡೆಯಿತು, ಸಿಡಿಯಿತು;
ಸುಲಿಗೆಯ ಗಾಣವು ಹಿಂಡಿತು ಹರಣವ;
ಎಲುಬು ಗೂಡಿನಲ್ಲಿ
ನೇತಿದೆ, ಜೋತಿದೆ ಪ್ರಾಣತಂತುಲವ;
ಆದರು ಆದರು ಉರುಳದೆ ಹೊರಳದೆ,
ಮಲಗಿದೆ, ಮಲಗಿದೆ ನಸುವೂ ಕೆರಳದೆ;
ಪಶುವಿಗು ಪಶುವಾಯಿತೆ ನರಜೀವಿತ,

ಮರಕೂ ಜಡ, ಹುಲುಹುಲ್ಲಿಗು ಅವನತ,
ಚಿರಕೂ ಮರೆಯಾಯಿತೆ ನಿಷ್ಕೃತಿ ಪಥ?
ಮೋಚನವೆಂದೀ ಕರ್ಮದ ?
ಏಳುವುದೆಂದೀ ಜನಪದ?

ಒಮ್ಮೆ ಒಮ್ಮೆ ಕಣ್ದೆರೆಯಲಿ, ಸಾಕು ;
ಹೂಂಕಾರದ ರವ ಮೊಳಗಲಿ, ಸಾಕು.
ನೆತ್ತರ ಹೀರುವ ತಗಣಿಗಳೆಲ್ಲ
ಕರುಳನುಂಬ ನರಿ ನಾಯಿಗಳೆಲ್ಲ
ಬಿಟ್ಟೋಡುವುವೋ ದೂರಕೆ,
ತಮ್ಮನ್ಯಾಯದ ಭಾರಕೆ
ಕುಸಿಯಲಿಹುವು ಪಾತಾಳದಾಳಕೆ,
ಹೆಸರಿಲ್ಲದ, ಉಸುರಿಲ್ಲದ ಕಾಳಕೆ!
ಆದರು ಮಲಗಿದೆ ಕೋಟಿಕೋಟಿ ಜನಗಣದ ಅಹಂಕಾರ,
ಜಗವನೆಲ್ಲ ಸುಟ್ಟುರಿಸಬಲ್ಲ ಬಗೆಬೆಂಕಿಯ ಫೂತ್ಕಾರ!

ಏಳುವುದೆಂದೀ ಜನಪದ?
ಕ್ರಾಂತಿರೌದ್ರಕೆ ಬಹುದೆಂದಿಗೆ ಹದ?
ಏಳುವುದೆಂದೀ ಜನಪದ?

# ಒಂದು ಸಂಜೆ

ಮೌನ ತಬ್ಬಿತು ನೆಲವ; ಜುಮ್ಮೆನೆ ಪುಳಕಗೊಂಡಿತು ಧಾರಿಣಿ;
ನೋಡಿ ನಾಚಿತು ಬಾನು; ಸೇರಿತು ಕೆಂಪು ಸಂಜೆಯ ಕದಪಲಿ.
ಹಕ್ಕಿಗೊರಲಿನ ಸುರತಗಾನಕೆ ಬಿಗಿಯು ನಸುವೇ ಸಡಿಲಿತು;
ಬೆಚ್ಚಬೆಚ್ಚನೆಯುಸಿರಿನಂದದಿ ಗಾಳಿ ಮೆಲ್ಲನೆ ತೆವಳಿತು.

ಇರುಳ ಸೆರಗಿನ ನೆಳಲು ಚಾಚಿತು, ಬಾನು ತೆರೆಯಿತು ಕಣ್ಣನು;
ನೆಲವು ತಣಿಯಿತು, ಬೆವರು ಹನಿಯಿತು; ಬಾಷ್ಪ ನನೆಸಿತು ಹುಲ್ಲನು.
ಮೌನ ಉರುಳಿತು, ಹೊರಳಿತೆದ್ದಿತು; ಗಾಳಿ ಭೋರೆನೆ ಬೀಸಿತು,
ತೆಂಗುಗರಿಗಳ ಚಾಮರಕೆ ಹಾಯೆನಿದು ಮೌನವು ಮಲಗಿತು.

# ಎಂದು ಕೊನೆ ?

ಎಂದು ಕೊನೆ ?– ಹಾ–ಎಂದು ಕೊನೆ ?
ಒಬ್ಬರನೊಬ್ಬರು ಕೊಂದುಕಳೆವ ಕೊಲೆ
ಹಬ್ಬಕೆ ತಾ ಬರದೇನು ಕೊನೆ ?
ಈ ಕೊಳೆಕೊಬ್ಬಿಗೆ, ಈ ಬಗೆಮಬ್ಬಿಗೆ
ಎಂದು ಕೊನೆ ?– ಓ–ಎಂದುಕೊನೆ ?

ಯುಗಯುಗದಿಂದಲು ಬಗೆಬಗೆಯಿಂದಲು
ನಗುವಿನೊಳೂ ಯಾತನೆಯೊಳಗೂ
ನರನೆದೆಯೊಳವನಳಲಿಪ ಅಳುಕಿದು :
'ಬರದೆ ಕೊನೆ ?– ಇದ–ಕಿರದೆ ಕೊನೆ ! '

ಎನಿಬರೊ ನರವರರೆದ್ದು ಬಂದು ಕಡೆ
ಕಡೆದರು ನರನೆದೆಯ ;
ಹಾಲಾಹಲವೇ ಹರಿಯಿತು, ಮೊರೆಯಿತು ;
ಬಾರದೇನೊ ಅಮೃತ–ಎಂದಿಗು–
ಬಾರದೇನೊ ಅಮೃತ ?

ಮುಗಿಲಲಿ ಮೂಡಿದ ಒಲವಿನ ಕನಸು
ಮನಸಿಗಿಳಿಯದಲ್ಲ–ಇಳಿದರು–
ನನಸನಾಳದಲ್ಲ !
ಅರಿವಿಗು ಇರುವಿಗು ಇರುವೀ ಅಂತರ
ಕಳೆಯಲಾರದೇನೋ–ಎಂದಿಗು–
ಅಳಿಯಲಾರದೇನೊ !

ಎದೆಗು ಎದೆಗು ನಡುವಿದೆ ಹಿರಿಗಡಲು ;
ಮುಟ್ಟಲಾರೆವೇನೋ–ಸೇತುವೆ–
ಕಟ್ಟಲಾರೆವೇನೋ !
ನಡುವಿನ ತೆರೆಗಳ ಮೊರೆಹವೆ ಮಾನವ

ಜೀವಗಾನವೇನೋ–ದೇವನ–
ದಿವ್ಯದಾನವೇನೋ !

ಒಬ್ಬರನೊಬ್ಬರು ನಂಬುವ ತುಂಬುವ
ಹಬ್ಬವು ಕಬ್ಬದ ಕಾದಂಬಿನಿಯಲಿ
ಮೂಡುವ ಮಸುಳುವ ಮಳೆಬಿಲ್ಲಾಯಿತೆ ?
ಮೊಳೆಯದೆ ಅದು ಎದೆಯಾಳದಲಿ ?
ಬೆಳೆಯದೆ ನಮ್ಮಾ ಬಾಳಿನಲಿ ?

ತಿಳಿಯುವ ಹೃದಯದ ಈ ತಳಮಳಕೆ,
ಬೆಳೆಯುವ ಬುದ್ಧಿಯ ಈ ಕಳವಳಕೆ,
ಬಲಿಯುವ ನರಕುಲದೀ ಒಳರೋಗಕೆ
ಎಂದು ಕೊನೆ ?–ಹಾ–ಎಂದು ಕೊನೆ ?
ಒಬ್ಬರನೊಬ್ಬರು ಕೊಂದುಕಳೆವ ಕೊಲೆ
ಹಬ್ಬಕೆ ತಾ ಇರದೇನು ಕೊನೆ ?
ಎಂದು ಕೊನೆ ?–ಹಾ–ಎಂದು ಕೊನೆ ?

# ಅಲಸನ ಹಾಡು

ಕೆಲಸವಿಲ್ಲದವನು ನಾನು
ಬರಿಯ ಅಲಸನು !

ಹಸಿವಾದರೆ ಎದೆಯನ್ನೇ
ತಿಂಬೆನೆಂದೆನು !
ಕಸುವಿದ್ದರೆ ಅಸುವನ್ನೇ
ಕೊಂಬೆನೆಂದೆನು !
ಉಸಿರಿದ್ದರೆ ನಿದ್ದೆಯನೇ
ತಂದೆನೆಂದೆನು !

ನೋಡುವುದೇ ನನ್ನ ಕೆಲಸ ;
ಇದನೆ ಕೆಲಸ ಎಂಬ ಅಲಸ ;
ಹಾಡುವುದೂ ಒಂದು ವಿರಸ ;
ಅದುವೆ ರಸಿಕನೆಂಬ ಸರಸ !

ಕುಳಿತು ಕುಳಿತೆ ಬಾನೆಡೆಗೇ
ಏರಬಲ್ಲೆನು,
ಮಲಗಿದಲ್ಲೆ ಮುಗಿಲನೆಲ್ಲ
ಸುತ್ತಿ ಬರುವೆನು.

ನಿಂತಲ್ಲಿಯೆ ಮನದ ಪಾ
ತಾಳಕಿಳಿದು ಬರುವೆನು ;
ಮೀನು, ಮೊಸಳೆ, ಮುತ್ತು ರತ್ನ
ಏನೇನನೊ ತರುವೆನು.

ಗಾಳಿ ಬೀಸುತಿರಲು ಮನವ
ಗಾಳಿಪಟವ ಗೈವೆನು ;
ಹೊನಲು ಹರಿಯುತಿರಲು ಎದೆಯ
ನಲ್ಲೆ ತೇಲಿಬಿಡುವೆನು.

ಜಗವು ನಗುತಲಿರಲು ಅಲ್ಲಿ
ಕುಳಿತು ಎದೆಯ ತೊಳೆವೆನು ;
ಜಗವು ಅಳುತಲಿರಲು ನಾನೂ
ಶೋಕವಾಗಿ ನಿಲುವೆನು.

ಚೆಲುವು ನಗಲು ನಾನು ಎದೆಯ
ಒಳಗೆ ಸೇರಿ ನಲಿವೆನು ;
ಒಲವು ಕದವ ಬಡಿಯೆ ನಾನು
ಮುಗಿಲ ಕಡೆಗೆ ನೆಗೆವೆನು !

ಮಾತಿನ ಬಿರುಗಾಳಿಗಂಜಿ
ಕುಸಿಯುತಿರುವೆನು ;
ಮೌನದ ಋಜುಭಾಷಿತಕ್ಕೆ
ಹಸಿಯುತಿರುವೆನು !

ಕೈಯನೆತ್ತಲಾರೆ ಮೈಯ
ನಲುಗಿಸಲಾರೆ ;
ಬರುವುದೆಲ್ಲ ಬರಲೊಂದನು
ತೊಲಗಿಸಲಾರೆ !

ಕೆಲಸವಿಲ್ಲದವನು ನಾನು,
ಬರಿಯ ಅಲಸನು !

# ಹುತಾತ್ಮರನ್ನು ನೆನೆದು

ನಾಡಿನೊಂದೊಂದು ಅಂಗುಲದಲ್ಲು ಮಿಡಿಯುತಿವೆ
ಅಳಿದ ವೀರರ ಧೀರಚೇತನಗಳು :
ಅಂಜುವೆದೆಗೂ ವೀರರಸವನುಕ್ಕೇರಿಸುವ
ಬಿರುಗಾಳಿಗಳ ಅಮರ ಕೇತನಗಳು.

ಬಾಳು ಸಾವಿನ ತುತ್ತು, ದೈವನಿಯಮದ ತೊತ್ತು ;
ಆದರ್ಶ ಸಾಧನೆಯೆ ಬಾಳ ತಿರುಳು—
ಬಲ್ಲೆವಾದರು ನಾವು ಅದಕಾಗಿ ಬಾಳನೇ
ಮುಡಿಪುಗೊಡುವವರಿಲ್ಲಿ ಎನಿತು ಜನರು ?

ಕೋಟಿಕೋಟಿಗಳಿಹರು ನಾಡಿನಲಿ ; ಕಲ್ಲಿಹುದು,
ಮಣ್ಣಿಹುದು, ನಾಯಿಯಿದೆ, ನರಿಗಳುಂಟು !
ಇವರೆ ಇವರೇ ನೋಡಿ ನಿಜಮಾನವರು, ಬಾಳಿ
ನಲ್ಲಿ ದಿವ್ಯವ ಕಂಡ ಪುಣ್ಯಧನರು :

ಗುಂಡುಗಳಿಗೆದೆಯೊಡ್ಡಿ ನಿಂತ ಭಟರು ;
ಲಾಠಿಗಳ ಬರಸಿಡಿಲ ಮುಡಿಯೊಳಿಟ್ಟವರು ;
ಸೆರೆಮನೆಯ ರೌರವದಿ ನರಳಿ ಮಡಿದವರು :
ಇವರೆ ಇವರೇ ಮಡಿದು ಬದುಕಿದಂಥವರು !

ತೊಗಲಿಗಂಟಿದ ಉಣ್ಣೆಯಂತೆ ಬಾಳಿಗೆ ಜೋತು
ಬಿದ್ದ ಹುಳುಗಳು ನಾವು ಬಲ್ಲೆವೇನು ?
ಕೊಳಗುಳದ ಬಿಸಿಯ, ಅಸುವಿನ ನೂರು ಕಸಿವಿಸಿಯ,
ಈ ಭವದ ನೂರಾರು ಸೆಳೆತಗಳನು ?

ಎಂಥ ಬಾಳಿನ ಕನಸೊ, ಎಂಥ ರಸಋಷಿ ಮನಸೊ,
ಎಂಥೆಂಥ ಆದರ್ಶಕೊಲಿದ ಬಾಳೊ—
ನಮಗಾಗಿ ನಾಡ ಬಿಡುಗಡೆಗಾಗಿ ಉರುಳಿತಲ !
ನೆನೆದು ಉರುಳಿಸು ನೀನು ಕಂಬನಿಗಳ !

ಮೊಗ್ಗ ಹೂವುಗಳೆನಿತೊ, ಹೀಚುಕಾಯಿಗಳೆನಿತೊ,
ಇನ್ನು ಮಾಗದ ಕಸುಕುಕಾಯಿ ಎನಿತೋ,
ಹಣ್ಣಾಗಿ ಬಲಿವ ಮೊದಲೇ ಹದ್ದು ಕಾಗೆಗಳ
ಬಾಯಿಗಿಳಿದಂತಳಿದ ಧೀರರಿವರು.

ಹೆಸರಿಲ್ಲದಳಿದ ಕಲಿಗಳನು ನೆನೆ : ಕಿವಿಗವಿಗೆ
ಬಂದು ಮೊರೆಯಲು ತಾಯ ಕರುಳ ಕೂಗು
ನರನರವು ನೆತ್ತರಿನ ಹನಿಹನಿಯು ಕುಣಿಕುಣಿಯೆ
ಮಸೆದು ಬರೆ ಆತ್ಮದ ಕೃಪಾಣದಲಗು ;

ಮನೆ ಮಠಗಳನು ಮರೆತು, ಬಳಿಯ ಮಡದಿಯ ಮರೆತು,
ಆಳುವ ಕಂದರ ಮರೆತು, ಮುಗಿಲಿನಲ್ಲಿ
ನಿಂತು ಕರೆದಾ ದಿವ್ಯ ಮುಖಕೆ ಮಾರಿದವರು
ತನುಮನದ ನಲವೊಲವಿನಾಸೆಗಳನು.

ಎಂಥ ಯುದ್ಧವೊ ಗೆಳೆಯ ! ಭಟರ ಕೈ ಬರಿದು ; ಮನ
ದಲ್ಲಿ ಹಗೆತನದ ನಂಜಿಲ್ಲ ನಸುವೂ.
ಮೊಗದ ನಸುನಗೆಯೊಂದೆ, ಮನದ ನಿಶ್ಚಯವೊಂದೆ
ಆತ್ಮಾರ್ಪಣದ ಪಣವೆ ಕಣ್ಣಮುಂದೆ !

ಇಂಥ ಜನ ಮುನ್ನಿಲ್ಲ. ಕೋಪತಾಪಕೆ ಖಡ್ಗ
ವೆತ್ತಿ ಹೋರಾಡಿ ಮಡಿಮಡಿದರಿಹರು ;
ಗುಂಡಿಗೂ ಲಾಠಿಗೂ ಚಿತ್ರಹಿಂಸೆಗು ಕೂಡ
ಕೈಯನೆತ್ತದ ವೀರರಿವರೆ ಇವರು !

ನಲ್ಲಿಯಿಂದುಗುವ ತಿಳಿನೀರ ಕುಡಿವೆವು ನಾವು
ಯಾವ ತೊರೆಯೋ ನದಿಯೊ ಬಲ್ಲೆವೇನು ?
ಎಲ್ಲಿಂದಲೋ ಮೇಲಕೆದ್ದ ಮೇಘಾವಳಿಯು
ಕನಿಕರದ ತನಿಹಾಲದಲ್ಲವೇನು ?

ದಶಕ ದಶಕದ ವೀರ ಸತ್ಯಾಗ್ರಹದ ಘೋರ
ಬಲಿದಾನ ಸೋಪಾನದಲ್ಲಿ ಹರಿದು
ಬಂದು ಸ್ವಾತಂತ್ರ್ಯಸುಧೆ ನಮ್ಮದಾಗಿದೆ ಇಂದು ;
ಮರೆವೆವೇ ಅದ ತಂದ ತ್ಯಾಗಿಗಳನು ?

ಯಾವ ಹೆಗ್ಗುರಿಗೆ ಹೋರಾಡಿ ಮಡಿದರೊ ಅವರು
ಯಾವ ಶುಭಕಾಗಿ ಬಾಳನು ಸವೆದರೋ
ಆ ಗುರಿಗೆ ಆ ಶುಭಕೆ ನಾವು ಮುಡಿಪಾದರೇ
ಸ್ಮಾರಕವು ಸಾರ್ಥಕವಾ ವೀರಗಣಕೆ.

ಅವರ ಜೀವನವೆ ಧ್ರುವತಾರೆಯಾಗಲಿ ನಮಗೆ,
ಅವರ ಭಾವವೆ ನಮ್ಮ ಬಲವಾಗಲಿ,
ಅವರ ತ್ಯಾಗವೆ ನಮ್ಮ ಯೋಗವಾಗಲಿ, ಅವರ
ನೆನಪೆ ರಣಕಹಳೆಯಾಗಲಿ ಬಾಳ್ವಿಗೆ.

# ಸ್ವಾತಂತ್ರ್ಯಗೀತ

೧

ಬದುಕಿರುವೆನು ನಾನು, ಅಹಾ, ಇಂದು ನಾನು ಧನ್ಯನು,
ಇಂದು ನಾ ಸ್ವತಂತ್ರನು;
ಉಬ್ಬಿದೆ ಎದೆ ತಬ್ಬಿದೆ ನಭವ ;
ಹೊಸಸಂತಸ ಹಬ್ಬುತಲಿದೆ ದುರ್ಭರ ಭವವ.

ದಾಸನಾಗಿ ಹುಟ್ಟಿ ದಾಸನಾಗಿ ಬಾಳಿ ಅಳಿದನು
ಎನ್ನದಿನ್ನು ನನ್ನ ಕಂಡು
ಬಾನಿನಲ್ಲಿ ಹಾರುತಿರುವ ಹಕ್ಕಿ ಹಿಂಡು ಹಿಂಡು,
ಹೂ ಹೂವನು ಅಲೆ ಅಲೆಯುವ ತುಂಬಿ ದಂಡು ದಂಡು,
ನೆಲಬಾನಿನ ನಡುವೆಲ್ಲವನಳೆವ ಬೆಳ್ಳಿಮುಗಿಲು,
ವನ ಉಪವನ ಪವನಲೀನ ಕೋಕಿಲದೆದೆ ಹುಗಿಲು ;—
ತಲೆಯನೆತ್ತಿ ನಿಂತೇನು, ಎದೆಯುಗಲಿಸಿ ನಿಂತೇನು ;
ನನ್ನ ದನಿಯ ಮೊಳಗಿಸೇನು ಬಾನಿನೆತ್ತರ,
ನನ್ನ ಮನೆಯ ಮಾಡಿಯೇನು ಮುಗಿಲ ಹತ್ತಿರ,
ನಾನು ಕೂಡ ಅಲೆ ಅಲೆವೆನು ಜಗದ ಬಿತ್ತರ—
ಇಂದು ನಾ ಸ್ವತಂತ್ರನು !
ಇಂದು ನಾನು ಧನ್ಯನು !

೨

ಈ ದಡಕೂ ಆ ದಡಕೂ ನಡುವೆ ಘೋರವಾರಿಧಿ
ಕಣ್ಣ ಮುಂದೆ ಕುದಿಯುತಲಿರೆ ಬಹುವಿಶಾಲ ನಿರವಧಿ ;
ಬೊಬ್ಬಿರಿಯುವ ಬಂದೆರಗುವ ಬಿರುಗಾಳಿಯ ತಾಂಡವ,
ಮುಸಗಿ ಮುಸಗಿ ಮೇಲ್ಬೀಳುವ ತೆರೆತೆರೆಗಳ ಭೈರವ—
ನೋಡಿ ಕಾಲುಗೆಟ್ಟರೆನಿತೊ,
ಎದೆಯ ಚಲವ ಬಿಟ್ಟರೆನಿತೊ,
ಹೇಡಿಗಳೋ ಹೇಡಿಗಳು,

ಪಾಪ, ಅರಿವುಗೇಡಿಗಳು—
ಬೆನ್ನ ಹಿಂದೆ ಬಿಟ್ಟು ಬಂದ
ಕತ್ತಲಲ್ಲಿ ಬೆಚ್ಚಗೆ
ಮುದುರಲೆಂದು ನಡೆದರು ;
ಕೊಚ್ಚೆಯಾದರೇನು, ಬರಿಯ
ರೊಚ್ಚೆಯಾದರೇನು ? ಹರಣ-
ಭರಣವೊಂದೆ ಹೆಚ್ಚಿಗೆ ;
ಇದ್ದುದಿದ್ದ ಹಾಗೆ ಇರುವುದೊಂದೆ
ಅವರ ಮೆಚ್ಚಿಗೆ :
ಬೇಡಿಗೆ ಕೈ ನೀಡಿದರು,
ಬಾಗಿದರೋ ಬಗ್ಗಿದರು,
ಅರಿಗೆ ಅಂಗಲಾಚಿದರು,
ನೆಲಕೆ ಮೈಯ ಚಾಚಿದರು,
ಹೇಡಿಗಳೋ ಹೇಡಿಗಳು—
ಪಾಪ, ಅರಿವುಗೇಡಿಗಳು !

ಕಿರಿದೋಣಿಯೊ, ಹಿರಿದೋಣಿಯೊ,—
ಏರಿ ಅಂದು ಹೊರಟೆವು ;
ತೆಪ್ಪ ಪಾತಿ ಹರಿಗೋಲೋ—
ಜಲಪಯಣಕೆ ನೆರೆದೆವು.

ದೂರ ತೀರದಲ್ಲಿ ಮೊರೆವ ಆ ಮನೋಜ್ಞಗೀತಕೆ,
ನಿದ್ದೆಯೆಚ್ಚರೆಲ್ಲವನ್ನು ಕಡೆವ ಆ ಪ್ರಭಾತಕೆ
ಏಕೊ ಮಾರು ಹೋದೆವು ;
ಕೂರಲಾರ, ನಿಲ್ಲಲಾರ
ದಿರಲಾರದೆ ಹೋದೆವು.
ಆರದಂಥ ದಾಹ ! ಅಮೃತ
ತೀರವರಸಿ ಹೊರಟೆವು.

ತೆರೆಯ ಕೈಯ ಬುಗುರಿಯಾಗಿ
ತಿರಿತಿರುಗುತ ತುಡಿದೆವು,
ಬಿರುಗಾಳಿಯ ಬವಣೆಯಲ್ಲಿ
ಮುಳುಗೇಳುತ ದುಡಿದೆವು.

ಕಡಲ ಕರಿಯ ಗಂಟಲಲ್ಲಿ ಹಡಗೆನಿತೋ ಇಳಿದುವು,
ಬಿರುಗಾಳಿಯ ಪದಘಾತಕೆ ದೋಣಿದೋಣಿ ಮುರಿದುವು,
ತೆರೆತೆರೆಗಳ ಕೈಹೊಯ್ಲಿಗೆ ಒಡೆ ಒಡೆದುವು, ಸಿಡಿದುವು :
ಕಡಲಾಳಕೆ ಬೀಳುವವರ,
ಜಲಚರಗಳು ಹೋಳುವವರ,
ಹೆಸರಿಲ್ಲದೆ, ಉಸುರಿಲ್ಲದೆ,
ಮೌನದೊಡಲಿಗಿಳಿಯುವವರ,
ನೋಯುವವರ, ಸಾಯುವವರ
ನರಳಾಟವೆ, ಚೀರಾಟವೆ
ನಮ್ಮ ಪಯಣದುದ್ದವೂ
ನಮ್ಮ ಯಾನಗಾನವು !

ಜೊತೆಗೆ ಪಯಣಹೊರಟ ಗೆಳೆಯರೆನಿತೊ ಮಂದಿ ಬಿದ್ದರು ;
ಕಡಲಾಳದ ನಿದ್ದೆಗಿಳಿದು ಬಿಡುಗಡೆಯೊಳು ಎದ್ದರು :
ದಾಸ್ಯದಲ್ಲು ಸ್ವಾತಂತ್ರ್ಯದ ದಿವದ ಕನಸನುಂಡವರು,
ಗುರಿಗೆ ನೇರ ನಡೆದು ನಡುವೆ ಬಿದ್ದು ಬದುಕಿಕೊಂಡವರು,
ಹೊನಲ ಮೇಲೆ ಹಾರಿ ನೆಗೆದು ನಲುಗಿದ ಬುದ್ಬುದಗಳು,
ಕತ್ತಲನ್ನು ಕೊರೆದು ಹೋದ ಮಿಂಚಿನ ಮರಿಮರಿಗಳು–
ಅವರೆಲ್ಲರನಲ್ಲೆ ಬಿಟ್ಟು, ಕಂಬನಿ ತರ್ಪಣವ ಕೊಟ್ಟು,
ಆ ಸೆಳೆತದ ಉರುಳಿನಲ್ಲಿ ಕೊರಳನಿಟ್ಟ ಯೋಧರು
ಹುಚ್ಚು ಹೊನಲನೇರಿ ಬರುವ ತಳಿರ ಸಂತೆಯಾದರು,
ಮುಂದೆ ಮುಂದೆ ಹೋದರು.

ಹುಟ್ಟು ಹಿಡಿದ ಕೈಕೈ ಮರವಟ್ಟು ಹೋದುವು ;
ದುಡಿದು ತುಡಿದ ಮೈಮೈ ಬರಿ ಕಾಷ್ಠವಾದುವು ;
ದೂರ ನೆಟ್ಟ ಕಣ್ಣು ಕಣ್ಣು ಮಂಜಾದುವು, ಮುಗಿದುವು ;
ಜೀತದ ಯಾತನೆಗೆ ಎದೆಯು
ಜಳ್ಳಾಯಿತು ; ಜೀವವು
ಹಣ್ಣಾಯಿತು, ಸಣ್ಣಾಯಿತು ;
ಮಣ್ಣಾಯಿತು ಹಂಬಲು.
ಉಸ್ಸೆನ್ನುತ, ಅಕಟೆನ್ನುತ, ಸೋತಿರೆ ಕೈ, ಮನಮನ
ಮಸಕಾಗಿರೆ, ಅಹಾ, ಅಂತು ಸೇರಿದೆವಿಂದೀ ದಿನ
ನಾವು ಬಯಸಿ ಬೆಂದ ದಡವ, ದೂರತೀರವ,
ಕಂಡೆವುದಯತೀರವ.

೩

ಇದೋ ನೋಡು, ನಾಡಿನಲ್ಲಿ ಎಲ್ಲೆಲ್ಲೂ ಹೊಸತನ ;
ಬೆಳಕು ಹರಿಯಿತಿಗೋ, ಅಹಾ, ಮುಂದೆ ಎಂಥ ನಂದನ !
ಎದೆಎದೆಯಲಿ ಗುಣಿಗುಣಿಸುತಲಿದೆ ತೃಪ್ತಿಯ ತನನನ.
ಅರಳಿತಿಗೋ ಮೊಗ್ಗೆಮೊಗ್ಗೆ, ಕೆರಳಿತಹೋ ಬುಗ್ಗೆ ಬುಗ್ಗೆ,
ಮೊಳಗುತಲಿದೆ ಮಂಗಳ, ಕೊರಳೆತ್ತಿದೆ ಕೋಕಿಳ.
ಚಳಿಗಾಲಕೆ ಕಲ್ಲಾಗಿಯೆ ಕೆಡೆದ ಚಟುಲವಾರಿ
ಬೇಸಗೆ ಬರೆ ಹರಿದೋಡುವ ತೆರದಿಂದುಕ್ಕೇರಿ
ಮೊರೆಯುತಲಿದೆ ಜನಜೀವನ, ಕೇಳು ಈ ನಿನಾದ !
ಮೊರೆಯಲದು ಸ್ವಚ್ಛಂದ, ಎಂದಿಗೂ ಅನಿರ್ಬಂಧ !
ನಮ್ಮ ನಾಡ ಮಂಗಳಪಥ ಆಗಲನಾರತ ಅಬಾಧ !
ಜಯ ಜಯ ಹೇ ಭಾರತ,
ನ್ಯಾಯಸತ್ಯಧರ್ಮಕರ್ಮ ಮರ್ಮ ಶರ್ಮಸಮ್ಮತ,
ಜಯ ಜಯ ಹೇ ಭಾರತ !

# ಅತಿಥಿಗಳು

೧

ಅದೃಶ್ಯಲೋಕದ ಅನೂಹ್ಯ ರೂಪದ
ಅನಂತಕಾಲದ ಯಾತ್ರಿಕರೇ,
ಮಣ್ಣಿನ ಮನದಲಿ ಹೊನ್ನನೆ ಬೆಳೆಯುವ
ಅಪೂರ್ವತೇಜದ ಮಾಂತ್ರಿಕರೇ !—
ಅತಿಥಿಗಳಹ ನೀವೆಲ್ಲರು ಇಲ್ಲಿಗೆ
ನೆಲಸಲು ಬಂದವರಲ್ಲ ;
ಒಂದೆ ಗಳಿಗೆ ಆಮೋದಕೆ ಬರುವಿರಿ,
ಬಂದರಗಳಿಗೆಯೊಳೇ ವೈಗರೆವಿರಿ;
ವಿಜನ ವಿಜನ ಮನವು,
ಶೂನ್ಯ ಶೂನ್ಯ ದಿನವು.

೨

ಇದಿಗೋ ಬಂದೆವು ಬಂದೆವೆನ್ನುವಿರಿ,
ಎದೆಗೋ ನೆನಪಿನ ಬೆಂಕಿಯನೆರೆವಿರಿ ;
ಎಂದೂ ಇಲ್ಲದ ಆಶೆತವಕಗಳ
ಒಂದೊಂದೇ ಹೊಸ ಬಯಕೆ ಬವಣೆಗಳ
ತಂದು ಕೂಡಿ, ಗರಿಮೂಡಿ ಹಾರುವಿರಿ—
ವಿಜನ ವಿಜನ ಮನವು,
ಶೂನ್ಯ ಶೂನ್ಯ ದಿನವು !

೩

ದಟ್ಟನೆಳಲ ಕೆಳಗಳಲುವ ಕೊಳದೊಳು.
ಥಟ್ಟನೆಲರು ಸುಳಿಯಲು ಎಲೆಎಲೆಗಳು
ಕದಲಿ ಕದಲಿ ಕಂಗೊಳಿಪ ಜರಡೆಯೊಳು
ಬೆಳಕಿನ ಕುಡಿಗಳು, ಮಿಡಿನಾಗರಗಳು
ತೂರಿ ಜಾರಿ ಬಂದೆರಗಿ ಹೋಗುವೊಲು
ಬರುವಿರಣ್ಣ ಈ ಮನಕೆ ಥಟ್ಟನೆ

ಹೇಳುವಂತೆ ಹೊಸತೊಂದು ಗುಟ್ಟನೆ
ನಟಿಸಿ ಅಟಮಟಿಸಿ ಪುಟಿದು ಹೋಗುವಿರಿ;
ಅಂತೆ ಪುಟಿಯಬೇಡಿ,
ಎದೆಯನು ಸೇರಿ ಮನೆಯ ಮಾಡಿ!

೪

ಬೆಳಗಾಗಲು ಎವೆ ತೆರೆಯುವ ಮೂಡಲು
ಮಡಿಲಲಿ ಮಲಗಿದ ಹಕ್ಕಿ ಹಕ್ಕಿಗಳ
ಕೊರಳ ಗೀತದಲಿ ಕೆರಳುವ ಹೊರಳುವ
ಸುಂದರ ಸುಮಧುರ ನಾದರೂಪರೇ,
ತಳಿರು ತಳಿರಿನಿಬ್ಬನಿಯ ಗೋಳದಲಿ
ಮೇಳಗೊಂಡು ಮೆರೆಮೆರೆವ ಭೂಪರೇ,
ಅರಳು ಮೊಗ್ಗೆಗಳ ಕಂಪುದಾರಿಯಲಿ
ಅಲೆವ ಅನಂತದ ಯಾತ್ರಿಕರೇ!
ಬನ್ನಿ, ಬನ್ನಿ, ಬನ್ನಿ,
ಇಲ್ಲೇ ಇರಲು ಬಂದೆ ಬನ್ನಿ!

೫

ಕುಳಿತು ನೀವು ಬೆಳ್ಮುಗಿಲಿನ ರಥದಲಿ
ನೊರೆನೊರೆದೇರುವ ತಾರಾಪಥದಲಿ
ನಲಿದು ಕೆಲೆದು ಕಿಲಕಿಲನೆ ನಕ್ಕು ಆ-
ನಂದದ ಆಟದಲಿ
ಮೈಮರೆತಲೆವೆಲೆ ಮುದ್ದುಮಕ್ಕಳೇ,
ಬಾನಿನೂರಿನಲಿ ನೆಲಸಿದೊಕ್ಕಲೇ,
ಬನ್ನಿ, ಬನ್ನಿ, ಬನ್ನಿ;
ಇಲ್ಲೇ ಇರಲು ಬನ್ನಿ, ಬನ್ನಿ!

೬

ಮಳೆಬಿಲ್ಲಿನ ತೂಗುಯ್ಯಲನೇರಿ
ತೂಗಿ ತೂಗಿ ಭೂತೀರವ ಸೇರಿ
ತುರುಗಿ ತುರುಗಿ ಬಂದೆರಗುವಿರಹಹಾ!
ವಿಜನವನದ ಕಾಸಾರ ತೀರಕೆ
ಬರುವ ಜಿಂಕೆಯಂತೆ,
ಬಣಗುನೆಲದ ಒಣ ಬಾಯ್ದೆರೆಗಿಳಿಯುವ
ಜೇನ ಹನಿಗಳಂತೆ.
ನಲವಿನಲ್ಲಿ ಮೈಗರೆದ ಮನವು ಮೈ
ಅರಿತು 'ಬಂದಿರಾ?' ಎನ್ನುವ ಮುನ್ನವೆ
ಒಲವಿನೊಂದು ಹನಿ ಜಿನುಗುವ ಮುನ್ನವೆ
ಹಾರಿ ನೆಗೆಯ ಬೇಡಿ,
ಎದೆಯನು ಸೇರಿ ಮನೆಯ ಮಾಡಿ.

೭

ನೀವಿಲ್ಲದೆ ಈ ಮನದೊಳಗೇನಿದೆ?
ನೀವಿದ್ದರೆ ಹೂವಿದೆ ಹೊಸಜೇನಿದೆ,
ಬಾನಿನ ಕೆಳೆಯಿದೆ, ಗಾನದ ಬೆಳೆಯಿದೆ,
ಮುಗಿಲ ಮಲ್ಲಿಗೆಯ ಎಳೆತ ಸೆಳೆತವಿದೆ,
ವೃಂದಾವನವಿದೆ, ಕಲ್ಪವೃಕ್ಷವಿದೆ,
ಅದು ಇದೆ, ಇದು ಇದೆ, ಎಲ್ಲ ಎಲ್ಲ ಇದೆ;
ನಿಮಗಾಗಿಯೆ ಈ ಮನದರಮನೆ ಇದೆ
ತೆರವು, ತೆರವು, ತೆರವು;
ನಿಮಗಾಗಿಯೆ ಎದೆಗದ್ದುಗೆ ಕಾದಿದೆ,
ಬರಿದು, ಬರಿದು, ಬರಿದು!
ಕನಸಿನ ಲೋಕದ ಬಣ್ಣ ಬಣ್ಣ ತಳೆದಣ್ಣರೆ, ಐತನ್ನಿ!
ನನ್ನಿಯ ನಾಡಿನ ಚಿಣ್ಣರೆ,
ನನ್ನೊಳಗಣ್ಣಿನ ಸಣ್ಣಸಣ್ಣರೇ,

ಬನ್ನಿ, ಬನ್ನಿ, ಬನ್ನಿ;
ಇಲ್ಲೇ ನೆಲಸಿ; ಬನ್ನಿ, ಬನ್ನಿ!

ಅತಿಥಿಗಳಹ! ನೀವೆಲ್ಲರು ಇಲ್ಲಿಗೆ
ನೆಲಸಲು ಬಂದವರಲ್ಲ;
ಒಂದೆ ಗಳಿಗೆ ಆಮೋದಕೆ ಬರುವಿರಿ,
ಬಂದರಗಳಿಗೆಯೊಳೇ ವೈಗರೆವಿರಿ,
ವಿಜನ ವಿಜನ ಮನವು,
ಶೂನ್ಯ ಶೂನ್ಯ ದಿನವು!

# ಕಲತ್ತೆಯಲಿ ಕಾಳಿ

## ೭೨

ಕಲ್ಕತ್ತೆಯಲಿ ಕಾಳಿ ಬಲಿಗೆ ಬಂದಳು ಮೊನ್ನೆ :
ನರಪಶುವು ನರಪಶುವ ಕೊಂದು ಕುಣಿಯಿತು ಕೇಕೆ
ಹಾಕಿ ; ನಲಿಯಿತು ತಿವಿದು ಹೊಡೆದಪ್ಪಳಿಸಿ ಸುಟ್ಟು
ಸುಲಿದು ಸಾಯಿಸಿ ಕೂಸುಕುನ್ನಿಗಳ, ಹೆಣ್ಣುಗಳ,
ಗಂಡುಗಳ, ದುರ್ಬಲರ, ದೀನರ, ಅನಾಥರನು.
ಈ ಪಶುವ ಹೆಣ ಬೀದಿಬೀದಿ ಮುಂದಯಿಸಿರಲು
ನೋಡಿ ಗಹಗಹಿಸಿ ರಿಂಗಣಗುಣಿದು ರಣಹದ್ದು
ಉತ್ಸವಕೆ ಬಿಜಯಗೈದಿತ್ತು ; ಬೀದಿಯ ನಾಯಿ
ಈ ವೈರದಾರ್ಭಟಕೆ ' ಜೀತೋSಸ್ಮಿ ' ಎಂದು ಸ್ವೈ
ರಗಾಗಿ ನಿಂತಿತ್ತು ; ಕಾಗೆಗಳ ಬಳಗ ' ಅಹ !
ನರನು ಸೃಷ್ಟಿಯ ಮುಕುಟ ಎಂಬ ಮಾತಹುದು ದಿಟ !'
ಎಂದು ಕಾ ಕಾ ಎಂದು ಕೊಂಡುಕೊನೆಯಿತು ನರನ.

ನಾಯಿಗೂ ಕಾಗೆಗೂ ಹದ್ದಿಗೂ ಈವರೆಗು
ಕೊಲುವ ನರ ಕೊಂದುದನು ತಿನ್ನಲೊಲ್ಲನಿದೇಕೆ ?
ಎಂಬ ಸಂಶಯ ಹರಿಯಲಿಲ್ಲ. ' ನರ ನಿಃಸ್ವಾರ್ಥಿ ;
ಕೊಲ್ಲುವನು ನಮಗಾಗಿ !' ಎಂದು ತಂತಮ್ಮೊಳಗೆ
ನಿರ್ಧರಿಸಿ ಗರಿಹೊಡೆದು ಬಾಲವಲ್ಲಾಡಿಸುತ
ಕೊರಲೆತ್ತಿ ಹಾಡಿದುವು ನರವಿಜಯಗೀತವನು.

ಕ್ರಿಸ್ತ ಬುದ್ಧರು ತಮ್ಮ ಅವತಾರವಿಂದು ಕೃತ
ಕೃತ್ಯವಾಯ್ತೆಂದು ಹಿಗ್ಗಿದರು ; ನಮ್ಮಾ ಗಾಂಧಿ
ವರುಷವರುಷದ ತನ್ನ ತಪಕೆ ಬಂದಿದೆ ಸಿದ್ಧಿ
ಎಂದು ತಣಿದನು ; ನೆತ್ತರಲ್ಲಿ ಬರೆದಿದೆ ನೋಡಿ :
ದೇವಮಾನವ ಗಣದ ಅವತಾರಸೂಚನೆಯು ;
ಮನುಕುಲದ ಅಂತಿಮ ವಿಮೋಚನೆಯ ಯೋಚನೆಯು !

# ಯಾರಾದರು ನೀನಾಗಿರು

ಯಾರಾದರು ನೀನಾಗಿರು, ಪ್ರಭುವೇ !
ನನ್ನೆದೆಯಾಳವನಾಳುವ ವಿಭುವೇ !
ನಿನ್ನಯ ಪದನಖದುನ್ಮುಖಮಯೂಖ
ಮಾಲೆಗೆ ಶರಣಾದೆನು ಗುರುವೇ !
ನಿನ್ನ ವಿಲಕ್ಷಣ ಕರುಣಾಘಾತಕೆ
ತಲೆಬಾಗಿದೆ ದೊರೆಯೇ !

ಹಳೆಯ ಹೆಸರು ಸೊಗಸದು ಈ ಮನಕೆ ;
ಹೆಸರೆಲ್ಲವು ಹುಸಿ ಎಂಬನುಮಾನಕೆ
ಸಿಕ್ಕಿದಂಥ ದುಃಖಿ,—ರೆಕ್ಕೆಯ—
ಬಲಕೆ ಉಕ್ಕಿ, ಸೊಕ್ಕಿ
ಹಳೆಗೂಡಿನಾಸೆ ಬಿಟ್ಟು,
ಹೊಸತನದ ಪಂಥ ತೊಟ್ಟು,
ದೂರ, ದೂರ, ದೂರ—
ಬಾನನೆಲ್ಲ ಈಜಾಡಿ ನೋಡಿ ತೊನೆದಾಡಿಯಾಡಿ ಹಾಡಿ,
ಕುಣಿದು ಕುಣಿದು ಕೊನೆಕೊನೆಗೆ ತನಗೆ ಕೊನೆಯಿರದ ದಣಿವು ಮೂಡಿ,
ರೆಕ್ಕೆ ಸೋಲುತಿರೆ, ಉಸಿರು ತೀರುತಿರೆ,
ಎಲ್ಲಿ, ಎಲ್ಲಿ, ಹಕ್ಕಿ ?
ನಿನ್ನ ಅದೃಶ್ಯ, ಅನೂಹ್ಯ, ಸನಾತನ ವಕ್ಷವೊಂದೆ ರಕ್ಷೆ !–ದೊರೆಯೇ–
ಅದೇ ಕೊನೆಯ ಭಿಕ್ಷೆ !

ಈಜುವವನ ಕೈ ಸೋಲುವ ವರೆಗೂ
ಕಡಲಿನಾಳ ಬಾಯ್ದೆರೆಯುವ ವರೆಗೂ
ತಾನೆ ತನ್ನ ದೈವ—ತಾನೇ—
ತನ್ನ ಜೀವದೇವ.
ಕಡಲ ತೆರೆಗಳೇರಾಟಕೆ ಗೆಲವು
ಬರಲು, ಕಳೆಯೆ ಕೈಕಾಲ್ಗಳ ಬಲವು,

ಮುಗಿಯೆ ತನ್ನಹಂಕಾರದ ಛಲವು,
ಏನು ಏನು ಮತ್ತೆ ?
ಅಯ್ಯೋ ಸತ್ತೆ ಸತ್ತೆ ಸತ್ತೆ ;
ನೀರಿನಾಳದಿಂದೆದ್ದು ಬರದೆ ದೊರೆ ನಿನ್ನ ವರದ ಹಸ್ತ ?
ಮೇರುವಂತೆ ಮೇಲೆದ್ದು ಬರಲಿ, ಓ, ನಾನು ನಿನ್ನ ವತ್ಸ !

ಯಾರಾದರು ನೀನಾಗಿರು, ದೊರೆಯೆ ;
ಹೆಸರಿಲ್ಲದೆ, ಹೆಸರರಿಯದೆ ಕೂಗುವೆ ;
ಯಾವ ಬಿಂಬಕೋ ನಾ ತಲೆಬಾಗುವೆ.
ಪೊರೆಯೊ, ಪೊರೆಯೊ, ತಂದೆ !
ಉಳಿದುದನೆಲ್ಲ ಬಿಟ್ಟು ಬಂದೆ.

# ಭಾರತದ ತಂದೆ ಗಾಂಧಿ

೧

ನಿನ್ನನರಿತು ನೋಡಲೂ ನಿನ್ನ ಕುರಿತು ಹಾಡಲೂ
ಕೋಟಿಕೋಟಿ ಜನದ ಮನದ ವ್ಯಥೆಯನೆಲ್ಲ ತೋಡಲೂ
ಅಯ್ಯೊ, ನಾ ಅಪಾತ್ರ, ತಂದೆ ;
ಬರಡುನೆಲದ ಬೀಜ ನಾನು,
ಮರದ ಫಲದ ವರದ ಕನಸು ಕಾಣುವಂಥ ದೀನನು,
ಶಕ್ತಿಹೀನ, ಭಕ್ತಿಹೀನ, ಮಹಾಮ್ಲಾನನು.
ಆದರೇನೊ ಪುಣ್ಯಲೇಶದಿಂದ
ನಿನ್ನ ದಿವ್ಯ ಪಾದ
ತುಳಿದ ಕಾಲದೇಶದೊಳೇ
ಬದುಕಿ ನಾ ಕೃತಾರ್ಥನು.

ಯಾವ ಬಿತ್ತೊ ನಾನು ಅದೇ
ಇದೇ ನೆಲದ ಬಸಿರಲಿ
ಬಾನೆತ್ತರ ಬೆಳೆವಂದವ,
ಆ ಚಂದವ, ಬಿಸವಂದವ
ನಿನ್ನೊಳಣ್ಣ ಕಂಡೆನು ;
ಅತ್ಯುನ್ನತ ಸುರಭೂಜವ–
ನಿಲ್ಲೆ ನೆಲದಿ ಕಂಡೆನು,
ಅಂತೆ ನಾನು ಧನ್ಯನು !
ಅದೂ ನಾನೆ ನನ್ನದೇನೆ
ಎಂದು ಮನಕೆ ತಂದೆನು ;
ಒಂದೆ ನಿಮಿಷ ನಿನ್ನ ಗಾಥ
ಮಹಿಮೆಯಾಳಕಿಳಿದೆನು ;
ನಿನ್ನ ದಿವ್ಯಕಾಂತಿಯಲ್ಲಿ
ಕರಕರಗಿದೆನಳಿದೆನು.

ಒಳಗಣ್ಣಿಗೆ ಕಂಡ ಹಾಗೆ
ಕರುಳು ಕೂಗಿ ಮೊರೆದ ಹಾಗೆ
ಗಿರಿಶಿಖರವು ಬೀಳಲು
ತಳದ ಪುಟ್ಟ ಕಲ್ಲು ಅಳಲಿ
ಮೊರೆಯುವಂತೆ ತೊರೆಯೊಳು
ಹಾಡಲೆಂದು ಬಂದೆ ತಂದೆ
ನನ್ನ ಸಣ್ಣ ನುಡಿಯೊಳು.

೨

ಬಹುವಿಶಾಲ ಆಲದವೊಲು ಮೇಲೆ ಬಿಸಿಲ ಬೇಗೆಗೆ
ಒಡ್ಡಿ ನಿನ್ನ ಮೈಯ ನಿನ್ನ ದಟ್ಟತಂಪು ನೆಳಲಿಗೆ
ಕರೆದೆಯೆಲ್ಲ ಮನುಕುಲವನು ; ಕಲಕಲಗಳ ಮೇಳಕೂ
ತಂದೆ ನೀನು ತಂದೆಯೊಂದು ಶ್ರುತಿ ಶುದ್ಧಿಯ ಸೊಬಗನು.
ಮೇಲು ಕೀಳು ಇಲ್ಲವಲ್ಲಿ ; ಇಲ್ಲ ಲಿಂಗ ಭೇದವು,
ಜಾತಿಮತ ವಿರೋಧವೂ, ವಾದವೂ ವಿವಾದವು.
ಸೋದರತೆಯ ಸಾಮಗಾನಲಹರಿ ನಿನ್ನ ಸುತ್ತಲೂ ;
ಸಮಭಾವದ ಸುಮಧುರಗತಿ ಬಾಳುಬಾಳನೆತ್ತಲು.
ಸತ್ಯದ ವ್ರತ, ತ್ಯಾಗದ ಪಥ, ಜನಸೇವಾ ಶಪಥವು,
ಶಾಂತಿ, ದಾಂತಿ, ನಿಗ್ರಹ, ಧೃತಿ, ಜೀವದಯಾ ಯೋಗವು.
ಮೂಲಶಕ್ತಿಯಲ್ಲಿ ಭಕ್ತ, ದೀನದಲಿತರಲ್ಲಿ ರಕ್ತ,
ಭವದ ನೂರು ಎಳೆತ ಸೆಳೆತದಲ್ಲಿ ಕಲ್ಲಿನೊಲು ವಿರಕ್ತ,
ಜರೆದವನನು ಹರಸಬಲ್ಲ, ಇರಿದವನನು ಉಳಿಸಬಲ್ಲ
ತಾನೆ ಬೆಂದು ತಾನೆ ನೊಂದು ಅರಿಯೆದೆಯನು ಅರಸಬಲ್ಲ,
ನೀ ಮಹಾತ್ಮನು !

ಸತ್ತ ಜನವನೆತ್ತಿದಂಥ ಸಂಜೀವನ ಶಕ್ತಿ ನೀನು ;
ಉತ್ತು ಮನವನಲ್ಲಿ ಒಲವ ಬಿತ್ತಿದಮರ ದೀಪ್ತಿ ನೀನು ;
ಕಗ್ಗತ್ತಲ ಪಾಳೆಯದೊಳೆ ಬೆಳಕಿನ ಬಾವುಟವನು
ಏರಿಸಿ ಹಾರಿಸಿದ ವೀರಧೀರ ದೇವದೀಪ ನೀನು ;

ನಮ್ಮಂತೆಯೆ ಬಾಳಿಕೂಡ ನಮ್ಮ ಗುರಿಯು ಗಿರಿಯು ಕೋಡ
ಏರಿ ನಿಂತೆ ನೀನು ಹೆಜ್ಜೆಹೆಜ್ಜೆ ಮೇಲಕೇರುತ ;
ಶಿಖರದಲ್ಲಿ ನಿಂತು ಕೂಡ ಮರೆಯಲಿಲ್ಲ ನಮ್ಮನು,
ತೊರೆಹರಿಯಿತು ನಿನ್ನ ಹೃದಯ ತೊಳೆಯಲೆಂದು ನಮ್ಮನು ;
ತೋಳನೆರಡನೆತ್ತಿ ನೀನು ಮೊರೆದೆ ದಿಕ್ಕುದಿಕ್ಕಿಗೆ ;
“ ಧರ್ಮದಿಂದ ಅರ್ಥ, ಕಾಮ ; ಶರಣಾಗಿರಿ ಧರ್ಮಕೆ.
ಬದುಕಿಸುವುದು ಕಲಿತು ಬದುಕಿ
ಎದೆ ಎದೆಯೊಳು ಒಲವ ಬೆದಕಿ ;
ಕಟ್ಟಿಕೊಳ್ಳಬೇಡಿ ನಿಮ್ಮ ನಡುವೆ ಸಣ್ಣ ಗೋಡೆಯ,
ಕಿತ್ತೊಗೆಯಿರಿ ಮನುಪುತ್ರರೆ, ನಿಮ್ಮ ನಖವ, ದಾಡೆಯ ;
ಹಿಡಿದು ನಡೆಯಿರಣ್ಣ ನೀವು ಸೋದರತೆಯ ಹಾದಿಯ.”—
ಎಂದೆ ನೀನು ; ಅಂತೆ ನಡೆದೆ; ನಡೆಯು ನುಡಿಯ ಮೀರಿತು ;
ನಮ್ಮ ಕಣಸು ಹಾಳೆಗಳಲಿ ನಿನ್ನ ಮಾತು ಸೇರಿತು.
ನಿನ್ನ ಕಂಡು ಬೆರಗಾದರು, ನಿನಗೆ ನಮೋನಮ ಎಂದರು,
ನಿನ್ನ ಹೊಗಳಿ ಹಾಡಿದರು, ಹಣ್ಣುಕಾಯಿ ತಂದರು ;
ನಿನ್ನ ಪಥವ ಮರೆತು ನಿನ್ನ ಪದಕೆ ಬಿದ್ದ ಅಂಧರು
ನಿನಗೆ ಗುಡಿಯ ಕಟ್ಟಿ ತಾವು ಬಚ್ಚಲಲ್ಲೆ ನಿಂದರು.
ಅಮೃತ ಬಂದು ಮನೆಯ ಮುಂದೆ ಹರಿಯುತಿದ್ದರೂ
ವಿಷವನರಸಿ ಹೊರಟರಯ್ಯೊ ಈ ಮತಾಂಧರು.
ನೀ ಹರಡಿದ ಹಿರಿಬೆಳಕನು ನುಂಗುತಿರಲು ಕತ್ತಲು,
ದ್ವೇಷಾಗ್ನಿಯು ದಳ್ಳಿಸುತಿರೆ, ಕೊಲೆಸುಲಿಗೆಯು ಸುತ್ತಲೂ,
ನೊಂದೆ ನೀನು ; ನಿನ್ನುದಗ್ರ ಚೇತನವೂ ಅದುರಿತು,
ಜಗವನೆಲ್ಲ ಹಬ್ಬಿದಂಥ ನಿನ್ನಾತ್ಮವು ಮುದುರಿತು ;
ನೀನೆತ್ತಿದ ಒಲವಿನ ಗುಡಿ ನೆಲಕೆ ಕುಸಿಯ ತೊಡಗಿತು ;
ನಿನ್ನ ಭಕ್ತಿ ವಿಶ್ವಾಸದ ಮೇರು ಕೂಡ ಸಡಿಲಿತು ;
ನರಲೋಕದ ಶುಭದ ನೌಕೆ ಕೆಳಬಂಡೆಗೆ ಬಡಿಯಿತು.

೩

ಬರಸಿಡಿಲಂತೆರಗಿತು ಹಾ ! ಕೊಲೆಗಡುಕನ ಕೈ :
ಜರಾಜೀರ್ಣ, ತ್ಯಾಗಶೀರ್ಣ ಎಲುಬುಗೂಡು ಮೈ

ಬಿತ್ತು ಕೆಳಗೆ, ಬಿದ್ದ ಹಾಗೆ
ನ್ಯಾಯಸತ್ಯದಯಾಧರ್ಮದೊಂದೆ ಆಧಾರವು;
ನಮ್ಮ ತಲೆಯ ಮೇಲೆ ಬಿತ್ತು
ನಮ್ಮ ಪಾಪ ಭಾರವು!
ಹಾ ರಾಮಾ! ಎಂಬಾ ಮಡಿ
ನುಡಿಯೆರಡರ ರೆಕ್ಕೆ ಜೋಡಿ
ಬಡಿಯಿತೊಮ್ಮೆ, ಬಳಿಕ ಮೌನ;
ತಲೆ ಬಾಗಿತು, ಕೈ ಮುಗಿಯಿತು;
ಬಳಿಕ ಮೌನ, ಮೌನ!
ಹಾರಿತಯ್ಯೋ, ತಂದೆ, ನಿನ್ನ
ಜೀವ ವೈನತೇಯವು,
ನಿನ್ನ ನಿರಿದ ನಮಗಂಟಿತು
ಮಾಯದಂಥ ಗಾಯವು!

ನಂಬಲೆಂತು, ನಂಬಲೆಂತು, ಇಂಥ ಘೋರವಾರ್ತೆಯ?
ಕೋಟಿಕೋಟಿ ಜನದ ಶೋಕವಾಣಿ ಆಕಾಶವಾಣಿ
ಮರಳಿ ಮರಳಿ ಮೊರೆದರೆ,
ನಂಬಲೆಂತು ನಮ್ಮ ತಂದೆ, ಕೋಟಿಕೋಟಿ ಜನದ ತಂದೆ
ಇನ್ನು ಇಲ್ಲ ಎಂದರೆ,
ನಾಡಿನೆಲ್ಲ ಕಡೆಯು ನಿನ್ನ ನಡೆಯ ಕಂಪು ನುಡಿಯ ಇಂಪು
ತುಂಬಿರೆ,
ನಾಡುನಾಡೆ ಭೂಮಿತಾಯಿಯಂಥ ನಿನ್ನ ಮರೆತು ಕೂಡ
ಒಳಗೊಳಗೇ ನಂಬಿರೆ,
ನಮ್ಮ ಮತಿಗೆ ನಮ್ಮ ಕೃತಿಗೆ ನಮ್ಮ ಬಾಳರೀತಿಗೆಲ್ಲ
ನೀನೆ ನಿಕಷದಂತಿರೆ,
ಸೋತ ಜನಕು, ಭೀತ ಜನಕು, ದಿಕ್ಕುಗೆಟ್ಟ ದೀನ ಜನಕು,
ಆರ್ತರಿಗು, ಅನಾಥರಿಗೂ ನೀನೆ ತ್ರಾಣನಂತಿರೆ,

ಭಾರತವೇ ನೀನು ನೀನೆ ಭಾರತದಂತಾಗಿರೆ,
ಇದ್ದಕಿದ್ದ ಹಾಗೆ ನೀನು ಇಲ್ಲವೆಂದು ಎಂದರೆ,
ನಂಬಲೆಂತು, ಹೇಳು ತಂದೆ, ಇಂಥ ಘೋರ ವಾರ್ತೆಯ?

ಇಂಥ ಅಳಲನುಲಿಯಬಲ್ಲ
ಬಾಯಿಯೆಲ್ಲಿದೆ?
ಜೀವರತ್ನ ಕಳೆದ ಬಳಿಕ
ಬಾಳೊಳೇನಿದೆ?
ಕಂಬನಿಗೂ ನಿಡುಸುಯ್ಲಿಗು
ಉಪವಾಸಕು ವನವಾಸಕು
ತೀರದಂಥ ಕಷ್ಟವು;
ನರ ಲೋಕದ ತಳಪಾಯವೆ
ಸಡಿಲಿದಂಥ ನಷ್ಟವು;
ಯುಗಯುಗಗಳೆ ಕಳೆಕಳೆದರು
ಸವೆಯದಿಂಥ ಪಾಪವು,
ನವೆನವೆದರು ಕಳೆಯದಯ್ಯೊ
ನಮ್ಮ ಹೃದಯ ತಾಪವು!

ಇಂದು ದೇಶದೇಶ ಶೂನ್ಯ, ಶೂನ್ಯವೆಲ್ಲ ಹೃದಯವು,
ಇಂದು ವೀರಧೀರ ಮುಖವು ಕೂಡ ನೋಡು ಸಭಯವು.
ಅಮೃತವಿಂಗಿ ಹೋಯ್ತು, ಇನ್ನು ವಿಷದಾಳಿಕೆ ಸುಲಭವು,
ಕರ್ಣಧಾರನಿಲ್ಲವಿನ್ನು, ಬಾಳದೋಣಿ ಅಲೆವುದು,
ತೆರೆತೆರೆಯೂ ಮುಸಗಿ ಮುಸಗಿ ಇನ್ನು ಅದನು ನೂಕುವುದು!
ಕಂಡ ಕಣಸು ಕೊನೆಗಂಡಿತು, ಜ್ವಲನದಾಸೆಹಿಂಗಿತು,
ಹೊಂಡದಲ್ಲೆ ಭಂಡಬಾಳು, ಮುಗಿಲಿನಾಸೆ ಮುಗಿಯಿತು.
ಕಾಣದೂರ ದಾರಿಯಲ್ಲಿ ಬೆಳಗುತಿದ್ದ ದೀಪವು
ಆರಿಹೋಯ್ತು; ಇನ್ನು ಕತ್ತಲಲ್ಲೆ ಚಿರವಿಲಾಪವು.
ಅಳಿದರೇನು, ಉಳಿದರೇನು ನಮ್ಮಂಥ ಕನಿಷ್ಠರು?—

ನರಲೋಕದ ನತದೃಷ್ಟರು, ಶ್ರೇಯಃಪಥಭ್ರಷ್ಟರು ?
ನೀನು—ಎಲ್ಲೊ ಒಮ್ಮೆ ನೆಲದ ತಪದ ಪುಣ್ಯಪಾಕಕೆ
ಮೊಳೆತು ಬರುವ ದೇವಬೀಜ ; ಯುಗಯುಗಗಳ ಶೋಕಕೆ
ಬರುವ ಶಾಂತಿ ತೇಜ ; ಬುದ್ಧಕ್ರಿಸ್ತ ರತ್ನಮಾಲೆಗೆ
ಸೇರಿದಂಥ ರತ್ನರಾಜ ; ಇನ್ನು ಇಂಥದೆಲ್ಲಿದೆ,
ನಮ್ಮ ತಂದೆ, ನಮ್ಮ ಗಾಂಧಿ, ನಮ್ಮ ಬಂಧುವಲ್ಲದೆ ?

ಹೋದನವನು ದೂರದೂರ ; ಮೂಲಕಾಂತಿಯೊಡಲಲಿ
ಕರಗಿ ಹೋದ ; ಅರಗಿ ಹೋದ ಹಿರಿಬೆಳಕಿನ ಕಡಲಲಿ ;
ನಾವು ಇಲ್ಲನಾಥರಾಗಿ ಅತ್ತುಕೂಗಿ ಕರೆದರೂ
ಬಾರನವನು ; ಅವನ ದಯೆಯ ನಗೆಯು ಇನ್ನು ಹೊಳೆಯದು ;
ಅವನ ಸೂಜಿಗಲ್ಲು ಬಾಳು ನಮ್ಮನಿನ್ನು ಸೆಳೆಯದು ;
ಅವನ ನುಡಿಯ ವೇದಘೋಷ ಇನ್ನು ಇಲ್ಲಿ ಮೊಳಗದು ;
ಇನ್ನು ಅವನ ಬೆಳಕಿನಲ್ಲಿ ನಮ್ಮ ಬಾಳು ಬೆಳಗದು ;
ಮಕ್ಕಳೊಡನೆ ಮಗುವೆ ಆಗಿ, ದೀನರಲ್ಲಿ ದೀನನಾಗಿ
ಎಲ್ಲ ಜನಕು ಸತ್ವಶಾಂತಿ ಸಾಂತ್ವನದ ನಿಧಾನವಾಗಿ
ಹೋದನಯ್ಯೊ, ಬಾರನಿನ್ನು ಆ ಅಜಾತಶತ್ರುವು,
ನಮ್ಮ ತಾಯಿ, ನಮ್ಮ ತಂದೆ, ನಮ್ಮ ಬಂಧು ಬಳಗವು !

ಆದರಿನ್ನು ಇಲ್ಲೆ ಇಹುದು ಅವನ ಜೀವಸಾರವು ;
ಮೊರೆಯುತಿಹುದು ಇನ್ನು ಇಲ್ಲೆ ಅವನ ದನಿ ಉದಾರವು ;
ಹೆಜ್ಜೆಹೆಜ್ಜೆ ಮೂಡಿದಂಥ ಅವನ ಬಾಳ ದಾರಿಯು ;
ಮೆಟ್ಟು ಮೆಟ್ಟಿಲಾಗಿ ಅವನು ಏರಿದಂಥ ಶಿಖರಿಯು ;
ನಾಡ ಮೂಲೆಮೂಲೆಯಲ್ಲು ಅವನ ಮೇಲುಪಂತಿಯು ;
ಬೆಳಗುತಲಿದೆ ಮನಮನದಲಿ ಅವನ ದೇವಕಾಂತಿಯು.

ಏಳುವವರೆ ಏಳಿ ; ಎದ್ದು ಹಿಡಿಯಿರವನ ಪಥವನು,
ಬಾಳುವವರೆ, ಇದ್ದು ಬಾಳಿ ಅವನ ವೀರವ್ರತವನು
ಏರುವವರೆ, ಏರಿ ಅವನು ಏರಿದಂಥ ರಥವನು

ಮುಟ್ಟುವವರೆ, ಮುಟ್ಟಿ ಅವನು ತೋರಿದಂಥ ಗುರಿಯನು
ಪಡೆಯುವವರೆ, ಪಡೆಯಿರವನ ಆತ್ಮದಮರಸಿರಿಯನು,
ಅವನ ದಾರಿಯೊಂದೆ ದಾರಿ ; ಉಳಿದುದೆಲ್ಲ ಹಳುವವು ;
ಅವನ ಗುರಿಯೆ ಗುರಿಯು, ಉಳಿದುದೆಲ್ಲ ವಿಫಲ ಚಪಲವು !

# ಮೊದಲ ಚರಣಗಳು


ಅದೃಶ್ಯಲೋಕದ ಅನೂಹ್ಯ ರೂಪದ . . . ೬೪
ಅಮೃತವಾಹಿನಿಯೊಂದು ಹರಿಯುತಿದೆ ಮಾನವನ . . ೪೨
ಅಲೆ ಅಲೆಯಾಗಿ ಬಂದೊಲೆಯುದೆ ತಂಗಾಳಿ . . . ೬
ಅಳಿದನೇ ಗೆಳೆಯ ನನ್ನೆದೆಯನಳಲಿನ ಕಡಲೊ . . . ೨೨
ಅಳಿಯಾಸೆಗಳ ಸುಳಿಗೆ ಸಿಲುಕಿವೆಲೆ ಮನವೆ . . . ೧೪
ಆರದಿರು, ಆರದಿರು, ಓ ನನ್ನ ಬೆಳಕೆ ! . . . ೪೮
ಆರ್ನೂರು ವರ್ಷಗಳ ಜವನಿಕೆಯ ತೆರೆದು ನ- . . . ೯
ಆವ ವಿಧದಲಿ ಕನ್ನಡದ ಮಾತೆ ನಿನ್ನಡಿಯ . . . ೩೯
ಈ ಹುರುಪು ಜವ್ವನದ ಸಿರಿಯುಗುವ ಬಾಳ್ವೆಯನು . . ೩೫
ಎದೆಯು ಮರಳಿ ತೊಳಲುತಿದೆ . . . . ೨೭
ಎಲೆ ಕವಿ ! ನಿನ್ನನು ನೀ ಮರೆ ; . . . . ೨೮
ಎಂದು ಕೊನೆ ?-ಹಾ-ಎಂದು ಕೊನೆ ? . . . ೫೨
ಏಳುವುದೆಂದೀ ಜನಪದ ? . . . . ೫೦
ಕಟ್ಟುವೆವು ನಾವು ಹೊಸನಾಡೊಂದನು-ರಸದ . . . ೧
ಕಲ್ಕತ್ತೆಯಲಿ ಕಾಳಿ ಬಲಿಗೆ ಬಂದಳು ಮೊನ್ನೆ . . - ೬೮
ಕೆಲಸವಿಲ್ಲದವನು ನಾನು . . . . ೫೫
ತೊರೆಗಳೆಲ್ಲ ಬರಲಿ ಬಿಡು . . . . ೩೮
ನನ್ನ ಮನವ ನನಗೆ ಕೊಡು . . . . ೪೬
ನಮ್ಮ ಮನೋರಥ ಊಹಾತೀತದ . . . ೧೩

ನಮ್ಮ ಹೊಲವಿದು ನಿಜವು ; ಬೆಳೆದುದು . . . ೧೦

ನಾಡಿನೊಂದೊಂದು ಅಂಗುಲದಲ್ಲು ಮಿಡಿಯುತಿವೆ . . ೫೭

ನಾವೆಲ್ಲರು ಒಂದೆ ಜಾತಿ, ಒಂದೆ ಮತ, ಒಂದೆ ಕುಲ . . ೪

ನಿನ್ನನರಿತು ನೋಡಲೂ ನಿನ್ನ ಕುರಿತು ಹಾಡಲೂ . . ೭೧

ಬದುಕಿರುವೆನು ನಾನು, ಅಹಾ, ಇಂದು ನಾನು ಧನ್ಯನು, . . ೬೦

ಮನೆನೆರೆಯ ದೇಗುಲದ . . . . ೧೫

ಮನೆಯೊಂದೊಡನೆದೆ ಕುಣಿದಾಡುವುದೆನು . . . ೩೫

ಮೌನ ತಬ್ಬಿತು ನೆಲವ ; ಜುಮ್ಮೆನೆ ಪುಳಕಗೊಂಡಿತು ಧಾರಿಣಿ . ೫೨

ಯಾರಾದರು ನೀನಾಗಿರು, ಪ್ರಭುವೇ . . . ೬೯

ಯಾವ ಮೋಹನ ಮುರಲಿ ಕರೆಯಿತು ದೂರ ತೀರಕೆ ನಿನ್ನನು ? . ೮

ಯುಗಯುಗಾದಿಯ ತೆರೆಗಳೇಳುತಿವೆ, ಬೀಳುತಿವೆ . . ೩೯

ಸಾಹಸವೆ ಬಾರ ! ಸತ್ವೋನ್ನತಿಯ ಸಿಂಗಾರ . . . ೨೩

ಸಿಗರೇಟಿನ ಹೊಗೆ . . . . . ೪೪

ಸೊಕ್ಕು ತಲೆಯ ರೆಕ್ಕೆ ಬಲಿಯ— . . . . ೨೨

ಸ್ವಾರ್ಥದ ವೇದಿಕೆಯಲಿ ನಿರ್ದಯತೆಯ . . . ೧೮

ಹಸಿದಿಹುದು ಹೊಟ್ಟೆ ; ಕೊಡು ಅನ್ನವನು. ನನ್ನತನು . . ೪೧

ಹೃದಯದ ಉದಾತ್ತಭಾವ, . . . . ೩೧

# ಭಾವತರಂಗ

**ಕ್ರೌ. ೧೬. ೮೦ ಪುಟಗಳು]** [ರೂ. ೧-೪-೦

(ಈ ಗ್ರಂಥಕರ್ತರ ಇನ್ನೊಂದು ಕವನಸಂಗ್ರಹ)

## ಕೆಲವು ಅಭಿಪ್ರಾಯಗಳು :

...Adiga combines grace with fire, beauty and melody with sturdiness, poise with adventure and experimentation with metrical and verbal mastery, which make him the most important of the younger poets of the day.

—National Standard, Bombay.

....ಉತ್ತಮ ಕವಿಗೆ ಬೇಕಾದ ವರಗಳನ್ನೆಲ್ಲ ಪಡೆದುಕೊಂಡು ಬಂದಿದ್ದಾರೆ ಶ್ರೀ ಅಡಿಗರು. ಭಾವನೆಯ ತೀಕ್ಷ್ಣತೆ, ಕಲ್ಪನೆಯ ವೈಭವ, ಭಾಷೆಯ ಸಿರಿ—ಎಲ್ಲ ಅವರಿಗೆ ದೈವದತ್ತವಾಗಿವೆ.

....ಕೆಚ್ಚೆದೆಯ ಗರ್ಜನೆ, ನಿರಾಸೆಯ ನೋವು, ಅಧೈರ್ಯದ ಮೆಲ್ನುಡಿ, ಪ್ರಣಯದ ಉತ್ಸಾಹ, ಪ್ರೇಮದ ಕರೆ, ಗೆಳೆತನದ ನಲ್ನುಡಿ—ಎಲ್ಲ ಭಾವನೆಗಳು ಮೈತಾಳಿವೆ ಇಲ್ಲಿಯ ಕವನಗಳಲ್ಲಿ. —ಕನ್ನಡ ನುಡಿ.

....ತಾಳಗತಿಯ ದೃಷ್ಟಿಯಿಂದ ಇವರ ಪ್ರತಿಯೊಂದು ಗೀತೆಯೂ ಒಂದು ಕಡೆದ ಬುಗುರಿಯಂತಿದೆ. —ವಾಣಿ.

....ಕವನದ ಶೈಲಿಯಲ್ಲಿ, ಧಾಟಿಯಲ್ಲಿ ಪೂರ್ಣನಾವೀನ್ಯವಿದೆ. ಭಾವ ಮಾತ್ರ ಪೂರ್ಣ ಸ್ವತಂತ್ರವಾದುದಾಗಿದೆ. —ದೇಶಬಂಧು.

ಶ್ರೀ. ಗೋಪಾಲಕೃಷ್ಣ ಅಡಿಗರವರ ಕಾವ್ಯವಾಹಿನಿಗೆ ವಿಶಿಷ್ಟತೆಯಿದೆ, ಸ್ವತಂತ್ರ ತೇಜಸ್ಸಿದೆ, ಹೃದಯವನ್ನು ಹೊಡೆದೆಬ್ಬಿಸುವ, ಆಲೋಚನೆಯನ್ನು ಪ್ರಚೋದಿಸುವ ಸತ್ವವಿದೆ....ಅವರ ಭಾವತರಂಗಗಳು ಪ್ರತ್ಯಕ್ಷಾನುಭವದ ಮಡಿಲಿನಿಂದ, ಧ್ಯಾನದ ಆಳದಿಂದ ಮೂಡಿ ಬಂದಿವೆ; ಜೀವಪೂರ್ಣವಾಗಿವೆ.

—ಪ್ರಬುದ್ಧ ಕರ್ಣಾಟಕ.

ಅಡಿಗರ ಕವನಗಳಲ್ಲಿ ವಿಚಾರ ಸ್ಫುಟತೆಯಿದೆ. ಉತ್ತಮೋತ್ತಮಭಾವನೆಗಳ ಬಂಧುರತೆಯಿದೆ. ಬಣ್ಣದ ಸಮ್ಮೋಹನತೆಯಿದೆ. ನಾದ ಮಾಧುರ್ಯವಿದೆ. ಕಲ್ಪನಾ ವಿಲಾಸವಿದೆ. ಹೆಚ್ಚಾಗಿ ಹೃದಯವನ್ನು ಸೆರೆಹಿಡಿದು ಸೂರೆಗೊಳ್ಳುವ ಗುಣವಿದೆ. ಇವೆಕ್ಕೆಲ್ಲ ಹೊಂದಿಕೊಂಡು ಹೊಸಹೊಸ ಛಂದಸ್ಸಿನ ತಾಳಲಯಗಳ ಯಶಸ್ವೀ ಪ್ರಯೋಗವಿದೆ. ಅವರ ಆಕರ್ಷಕ ಶೈಲಿಯು ಪಾಕದಲ್ಲಿ ಓಜಸ್ಸಿದೆ.

—ಜಯಕರ್ಣಾಟಕ.

ಅಡಿಗರ ನುಡಿಯಲ್ಲಿ ಕೆಚ್ಚಿದೆ; ಲಾಲಿತ್ಯವಿದೆ. ವಿಧಿಗೆ ಇದಿರಾಗುವ ಅನಿರ್ವಿಣ್ಣ ಉತ್ಸಾಹವಿದೆ....ಅವರ ಗೀತಗಳು ಕೆಲವು ಮೂಕ ಹೃದಯಗಳಿಗೆ ಕಲಕಂಠಗಳನ್ನೂ ಸುಕುಮಾರ ಹೃದಯಗಳಿಗೆ ಒಂದು ಭರವಸೆಯನ್ನೂ ಕೊಡುವುವೆಂದು ನಾನು ಹೇಳಬಲ್ಲೆ. —ದ. ರಾ. ಬೇಂದ್ರೆ.

'ಶ್ರೀ' ಅವರ

# ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ

೧. ಭಾಷಣಗಳು ಮತ್ತು ಲೇಖನಗಳು— ಕ್ರೌನ್ ೮. xxxii+೧೬೭.

೨. ಮುನ್ನುಡಿಗಳು ಮತ್ತು ಲೇಖನಗಳು—ಕ್ರೌನ್ ೮. viii+೧೬೯–೨೬೩.

"ಶ್ರೀ"ಯವರು ವಾಕ್ಪ್ರೌಢಿಯುತರು, ವಾಕ್ಕೋವಿದರು, ವಾಗ್ವೈಭವಶಾಲಿಗಳು. ವಾಗ್ಮಿತೆಯಲ್ಲಿ ಅವರ ಐಹಿಕ ಸಾಹಸಗಳ ಚರಿತ್ರೆ ಅಡಗಿತ್ತು; ಅವರ ಆತ್ಮದ ಕುರುಹು ಪ್ರತಿಬಿಂಬಿಸಿತ್ತು . . . . ಆ ವಾಗ್ವಿಜೃಂಭಣೆಯನ್ನು ಇನ್ನೆಲ್ಲಿ ಕಾಣೋಣ? ಆ ಉಚ್ಚಾರಣೆ, ಆ ಅವಧಾರಣೆ? ಆ ಲಯ, ಆ ಗತಿ; ಆ ಝುರಿ, ಆ ಜಾಣ್ಮೆ? ಆ ಪದ ವಿನ್ಯಾಸ ಕಲೆ, ಆ ಆನಂದಲಹರಿಗಳನ್ನು ಇನ್ನೆಂದು ಅನುಭವಿಸೋಣ? ಪ್ರಥಮಶ್ರೇಣಿಯ ಭಾಷಣಕಾರನಿಗೆ ಇರಬೇಕಾದ ಶಾರೀರಕ ಮಾನಸಿಕ ಗುಣಮಣಿಗಳೆಲ್ಲವೂ "ಶ್ರೀ"ಯವರಲ್ಲಿ ನಿಬಿಡವಾಗಿ, ಅಪೂರ್ವ ಅಲಂಕರಣದಲ್ಲಿ ಕೂಡಿಕೊಂಡಿದ್ದವು! "ಶ್ರೀ"ಯವರು ಭಾಷಣವನ್ನು ಮಾಡುತ್ತಿರಲಿಲ್ಲ, ಭಾಷಣವನ್ನು ಬಾಳುತ್ತಿದ್ದರು. ಅವರದೊಂದು ಉಪನ್ಯಾಸವೆಂದರೆ ಕಿವಿಯಲ್ಲಿ ಕೇಳಲು ಮಾತ್ರ ಮಂದಿ ಹೋಗುತ್ತಿರಲಿಲ್ಲ; ಕಣ್ಣು ಕಿವಿ ಚಿತ್ತ ಹೃದಯ ಮನಸ್ಸು ಆತ್ಮವೆಲ್ಲಕ್ಕೂ ಹಬ್ಬ ಹೊಂದಿಸಿಕೊಳ್ಳಲು ಹಾತೊರೆಯುತ್ತಿದ್ದರು. . . . .

* * * * *

ಅವರ ಒಂದೊಂದು ಭಾಷಣವೂ ಒಂದೊಂದು ಕಾವ್ಯಬಂಧ, ಸಂಗೀತ ಕೃತಿ, ಕಲಾಸೌಧವಾಗಿರುತ್ತಿತ್ತು. . . .

. . . . ಈ ಇನ್ನೂರರುವತ್ತುಮೂರು ಪುಟಗಳಲ್ಲಿ ಕನ್ನಡಿಗರಿಗೆ ನಿಶ್ಚಯವಾಗಿ ಒಳ್ಳೆಯ ಗದ್ಯಸಾಹಿತ್ಯ ಲಭಿಸಿದೆ.

**ಶ್ರೀ ಎಸ್. ವಿ. ರಂಗಣ್ಣನವರ**
ಪೀಠಿಕೆಯಿಂದ

ಬೆಲೆ :

ಸಾದಾ ಪ್ರತಿ ರೂ. ೪–೧೨–೦] [ಲೈಬ್ರರಿ ಪ್ರತಿ ರೂ. ೬–೦–೦.

ಕಾವ್ಯಾಲಯ * ಪ್ರಕಾಶಕರು * ಮೈಸೂರು